ಕೊರವಂಜಿ

A. ANANTHIAH

ಸಂಪುಟ ೧೨ ಫೆಬ್ರವರಿ ೧೯೫೪ ೧೧ ಸಂಚಿಕೆ

ಕುಹಕಿಡಿಗಳು

ನೂತನ ದಂಪತಿಗಳಿಗೆ ಇನ್ನು ಮೇಲೆ "ಪಂಚವಾರ್ಷಿಕ ಪ್ಲಾನ್"ನ ಪ್ರತಿಯೊಂದನ್ನು ಬಹುಮಾನವನ್ನಾಗಿ ಸರ್ಕಾರ ಕೊಟ್ಟರೆ ಚೆನ್ನಲ್ಲವೇ ?

* * *

ಸ್ವಾತಂತ್ರ್ಯೋತ್ಸವದಿಂದ ನಾಲ್ಕನೆಯ ದಿನವೇ ಬಾಪೂಜೀಯವರ ಚರಮ ತಿಥಿ ಎಂದು ಜ್ಞಾಪಿಸಿಕೊಳ್ಳಲೇ ಬೇಕು !

* *

ಕಲ್ಯಾಣಿ ಕಾಂಗ್ರೆಸಿನ ಚಟುವಟಿಕೆಗಳನ್ನು ಅಮೇರಿಕಾದ ಟೈಂ ಪತ್ರಿಕೆಯಲ್ಲಿ ಮೊಟ್ಟಮೊದಲು, ನಮ್ಮೂರಿನವರು ಓದಿದರಂತೆ.

* * *

ನಮ್ಮ ಮನೇಲಿ ಪ್ಲೇಗ್ ಇಲಿ ಸತ್ತರೆ ನಿಮ್ಮಮನೆಯಲ್ಲಿ ನಿಮ್ಮ ಪಾಡಿಗೆ ನೀವಿರಲು ಏನು ತೊಂದರೆ ? ಎಂದು ಪಾಕಿಸ್ತಾನದವರು ನೆರೆಭಾರತವನ್ನು ಕೇಳುತ್ತಿದ್ದಾರಂತೆ.

* * *

ಮದ್ರಾಸಿನ ಕಾಂಗ್ರೆಸ್ ಪ್ರದರ್ಶನಾಲಯದಲ್ಲಿದ್ದ ಒಂದು ಸರ್ಕಾರಿ ಏಣಿಯನ್ನು ತೇನ್‌ಸಿಂಗರು ಹತ್ತಲೇ ಇಲ್ಲವಂತೆ.

*　　　*　　　*

ಪಾನ ನಿರೋಧದಿಂದಾಗಿ ಹಲವು ಪ್ರಜಾ ಸಭೆಯ ವಿರೋಧ ಸದಸ್ಯರು ಮಾತನಾಡಲೂ ಸಾಧ್ಯವಾಗಲಿಲ್ಲವಂತೆ.

— ಅದಕ್ಕೇ ಪಾನ ನಿರೋಧವನ್ನು ಯಶಸ್ವಿಮಾಡಲು ಆಳುವ ಸರ್ಕಾರ ಪಣ ತೊಟ್ಟಿರುವುದು. ಅಲ್ಲವೇ?

*　　　*　　　*

ನಮ್ಮ ಗಣಿತ ಶಾಸ್ತ್ರಾಧ್ಯಾಪಕರು ಗಹನವಾದ ಲೆಕ್ಕ ಒಂದನ್ನು ಮಾಡುತ್ತಿದ್ದರೆಂಬುದು ದಿಟವಂತೆ.

— ಮೊನ್ನೆ ತಾನೆ ವರಮಾನ ತೆರಿಗೆಯ ಪಟ್ಟಿಯನ್ನು ಕಚೇರಿಗೆ ಕಳಿಸಿದರಂತೆ.

*　　　*　　　*

ವೈದ್ಯರ ಸಮ್ಮೇಳನದ ಅಧ್ಯಕ್ಷ ಡಾ|| ಮೇಖ್ರಿಯವರು ದತ್ತಾತ್ರೇಯ ಪೀಠವನ್ನು ಅಲಂಕರಿಸಿದ್ದರಂತೆ.

— ಈ ಸುದ್ದಿಯನ್ನು ಅಮೆರಿಕಾದಲ್ಲಿ ಪ್ರಚುರಪಡಿಸಲೇಬೇಕು.

*　　　*　　　*

ಸುಪ್ರಸಿದ್ಧ ಕಾಗದದ ವ್ಯಾಪಾರಿಯೊಬ್ಬರು "ನನ್ನ ಆಸ್ತಿಯೆಲ್ಲವನ್ನೂ ಕಾಗದದಲ್ಲೇ ಮಾಡಿದೆ" ಎಂದು ಹೇಳಿದರಂತೆ.

— ಕಾಗದದಲ್ಲೇ ಹಣ ಮಾಡಲೆತ್ನಿಸಿದ ನಮ್ಮ ದೋಸ್ತಿಗಳನ್ನು ಕೌಂಟರ್ ಫೀಟ್ ಅಪರಾಧಕ್ಕೆಂದು ಶಿಕ್ಷಿಸಿದರು.

*　　　*　　　*

ಅಣು ಬಾಂಬಿನ ಸಮ್ಮೇಳನಕ್ಕೆ ಅಥರ್ವಣ ವೇದ ಪಾರಂಗತರನ್ನು ಸೇರಿಸಿಕೊಳ್ಳಲೇಬೇಕು ಎಂದು ಇನ್ನೂ ಯಾವ ಸಭೆಯೂ ಠರಾವು ಮಾಡಿದುದು ಪ್ರಚುರವಾದಂತಿಲ್ಲ.

"　　　*　　　*

ಐಸೆನ್ ಹೋವರರನ್ನು ನೋಡಿದರೆ ಮೀನಾಕ್ಷಿ ಜ್ಞಾಪಕ ಬರುತ್ತೆ ಅಂತ ಅಂದಾಗ ಅದು ಹೇಗೆ ಎಂದು ಕೇಳಲೇಬೇಕಾಯ್ತು.

— ಮೀನಿನ ಕಣ್ಣೇ ಇಬ್ಬರಿಗೂ ಎಂದುತ್ತರ ಬಂತು.

ಉರಿಗಾಳು

ದೇಶದಲ್ಲಿ ಬೆಳೆದು ಬರುತ್ತಿರುವ ಸಂಕುಚಿತ ಪ್ರಾಂತೀಯತೆಯ ಬಗ್ಗೆ ಜನರು ಜಾಗರೂಕರಾಗಿರಬೇಕು (ನ್ಯಾ. ಭಗಲಾ) ಅದಕ್ಕೇ ಅಲ್ಲವೆ, ವಿಶಾಲ ಪ್ರಾಂತಗಳಾಗ ಬೇಕೆಂದು ಜನ ಕೇಳುತ್ತಿರುವುದು.

* * *

ರೈಲು ಅಪಘಾತವಾದಾಗ ನಾನು ಬೆಳಗ್ಗಿನ ಪ್ರಾರ್ಥನೆ ಮಾಡುತ್ತಿದ್ದೆ; ದೇವರು ನನ್ನನ್ನು ಉಳಿಸಿದ (ಜಫರುಲ್ಲಾ ಖಾನ್) ಆತ ಅಹಮ್ಮದೀಯ, ಮಹಮ್ಮದೀಯ ರಲ್ಲ ಎಂದು ದೂರುತ್ತಿದ್ದವರಿಗೆಲ್ಲ ಇದೊಂದು ಪಾಠ.

* * *

"ಆಸ್ತಿಕರ ವಿಷಯದಲ್ಲಿ ತರಬೇತಿ; ಬ್ರಿಟನಕ್ಕೆ ೬ ಹಿಂದಿ ಅಧಿಕಾರಿಗಳು" (ಹುಬ್ಬಳ್ಳಿ ಪತ್ರಿಕೆ) ಸೆಕ್ಯುಲರ್ ಸರ್ಕಾರಕ್ಕೇಕೆ ಈ ಹವ್ಯಾಸ ?

* * *

"ಕಾಂಗ್ರೆಸ್ಸು ತನ್ನ ಬಾಗಿಲನ್ನು ಮುಚ್ಚಿಲ್ಲ" (ನೆಹ್ರು) ಆದರೆ, ಹೋಗಿಲನ್ನೂ ಮುಚ್ಚಿಲ್ಲವಲ್ಲಾ; ಆದ್ದರಿಂದಲೇ ಅನೇಕರು ರಾಜಿನಾಮೆ ಈಯುತ್ತಿರುವುದು.

* * *

ಎದುರು ಪಕ್ಷದ ಮೂವರು ತಮ್ಮ ವೋಟುಗಳನ್ನು ತಮ್ಮ ನಾಯಕರ ಸೂಚನೆ ಯಂತೆ ಚಲಾಯಿಸಲಿಲ್ಲ (ವರದಿ) ಆಗಾಗ, ಬುದ್ಧಿ ತಿಳಿಯಾಗುವುದೂ ಉಂಟು.

* * *

"ನಿಮಗೆ ಎಂಥ ಶಾಲೆಗಳು ಇಷ್ಟ ?" ಎಂದು ಬಾಲಕ ಬಾಲಕಿಯರನ್ನು ಕೇಳಿ ತಿಳಿಯುವ ಪ್ರಯತ್ನಕ್ಕೆ ಸರ್ಕಾರ ತೊಡಗಬೇಕು (ಭಾಷಣ) ನಮಗೆ ಗೊತ್ತಿದೆ, ಅವರೆಂಥ ಶಾಲೆಯನ್ನು ಬಯಸುತ್ತಾರೆಂಬುದು: "ಮುಚ್ಚಿದ ಶಾಲೆ"

* * *

ಮೊನ್ನೆ ನಡೆದ ರೈಲು ಅಪಘಾತದಲ್ಲಿ ಸಿಕ್ಕಿಬಿದ್ದ ಉನ್ನತ ಅಧಿಕಾರಿಗಳೊಬ್ಬರು ಅದನ್ನು ವಿವರಿಸುತ್ತಾ, "ನಾನು ಇದ್ದಕ್ಕಿದ್ದಹಾಗೆ ಮುಗ್ಗರಿಸಿದೆ, ಜ್ಞಾನತಪ್ಪಿತು" ಎಂದರು. ಆಗ, ಅವರ ಸ್ನೇಹಿತರೆಲ್ಲರೂ, "ಅದುಸರಿ! ಇನ್ನೆಷ್ಟು ವರ್ಷಗಳಲ್ಲಿ ನಿನ್ನ ಜ್ಞಾನ ಸರಿ ಹೋಗುತ್ತದಂತೆ?" ಎಂದು ಕೇಳಿದರು........ಅವರನ್ನು ಕೇಳಿ ಏನು ಪ್ರಯೋಜನ?

ಮೋಟಾರ್‌ಗೆ ಸಿಕ್ಕಿ 'ಪ್ರಾಣನೀಗಿದ ಹುಡುಗನ ತಂದೆಗೆ ೧೦೦೦ ರೂಪಾಯಿ ಪರಿಹಾರ ವಿಧಿಸಿದಾಗ, ಆತ, "ಸಾಲದು, ಸ್ವಾಮಿ! ನನ್ನ ಮಗ ಅರವತ್ತೈದುವರ್ಷ ಬದುಕುತ್ತಿದ್ದ, ಸಾವಿರ ರೂಪಾಯಿ ಸಂಬಳತರುತ್ತಿದ್ದ, ಅಂತ ಅವನ ಜಾತಕ ಹೇಳುತ್ತದೆ" ಎಂದು ವಾದಿಸಿದನಂತೆ.

* * *

ವ್ಯವಸಾಯಮಂತ್ರಿಗಳನ್ನು ತುರುತಾಗಿ ನೋಡಬೇಕೆಂದು ಮೊನ್ನೆ ಒಬ್ಬರು ಆತುರ ಆತುರವಾಗಿ ಒಳನುಗ್ಗಿದರು........ ಏಕೆ, ಎಂದಾಗ, "ನನ್ನ ಮನೆ ಮುಂದಿನ ತುಲಸಿಗಿಡ ಚೆನ್ನಾಗಿ ಬೆಳೆಯುತ್ತಿಲ್ಲ" ಎಂದರಂತೆ.

* * *

ನೀವು ನಮ್ಮ ಮಂತ್ರಿ ಸಂಪುಟವನ್ನು ಸೇರಲೊಪ್ಪಿರುವುದಕ್ಕೆ ವಂದನೆಗಳು ಮುಂದಿನ ತಿಂಗಳ ಮೊದಲನೆಯ ತಾರೀಖಿಗೆ ನಿಮ್ಮನ್ನು ಸೇರಿಸಿಕೊಳ್ಳುತ್ತೇವೆ– ಎಂದು, ಮುಖ್ಯ ಮಂತ್ರಿ ಹೇಳಿದಾಗ, ಆತ, "ಮುಂದಿನ ತಿಂಗಳು ಒಂದನೆಯ ತಾ|| ನಾನು ರಾಜಿನಾಮೆ ಕೊಡಬೇಕೆಂದು ಸಂಕಲ್ಪಮಾಡಿರುವೆನಲ್ಲಾ" ಎಂದರಂತೆ.

* * *

ಕ್ರಿಕೆಟ್ ಟೀಮಿನ ಕ್ಯಾಪ್ಟನ್ ಒಬ್ಬರು, ಅದನ್ನಾರಿಸಿದ ಸಮಿತಿಗೆ ಪತ್ರ ಬರೆಯುತ್ತಾ, "ಶುದ್ಧ ಅಪ್ರಯೋಜಕರಾದ ಇಬ್ಬರನ್ನು ನೀವು ಆರಿಸಿರುವುದು ಆಕ್ಷಮ್ಯ" ಎಂದು ಹೇಳಿದಾಗ, ಅವರು, "ಆ ಇನ್ನೊಬ್ಬರ ಹೆಸರನ್ನು ದಯವಿಟ್ಟು ಸೂಚಿಸುವಿರಾ?" ಎಂದು ಉತ್ತರಿಸಿದರಂತೆ.

* * *

ಕಲ್ಯಾಣ್ ಕಾಂಗ್ರೆಸ್ ಅಧಿವೇಶನಕ್ಕೆ ಖಾದಿ ಧರಿಸಿ ಬಂದಿದ್ದ ಅನೇಕ ಸದಸ್ಯರುಗಳನ್ನು, ಅವರ ಆಪ್ತ ಮಿತ್ರರಿಂದಲೂ ಗುರುತು ಹಿಡಿಯಲು ಸಾಧ್ಯವಾಗಲಿಲ್ಲವಂತೆ.

* * *

ಮಗುವಿಗೆ ಬಿಸಿಬೇಳೆ ಹುಳಿಅನ್ನ ತಿನ್ನಿಸಬಹುದೇ, ಎಂದು ಒಬ್ಬಾಕೆ ಡಾಕ್ಟರನ್ನು ಕೇಳಿದಾಗ, ತಿನ್ನಲಿ, ನನಗೆ ಒಳ್ಳೆಯದು, ಎಂದರಂತೆ.

* * *

ಒಂದು ಸಂಘದ ಕಾರ್ಯದರ್ಶಿ ಮತ್ತೊಂದು ಸಂಘದ ಕಾರ್ಯದರ್ಶಿಯನ್ನು ಕಂಡಾಗ, "ಇವತ್ತು ಬೆಳಗ್ಗಿನಿಂದ ಇದುವರೆಗೆ ಸುಮಾರು ೨೦ ಜನ ದೊಡ್ಡಮನುಷ್ಯರನ್ನು ಭೇಟಿಮಾಡಿದೆ" ಎಂದು ಹೇಳಿದ. ಆಗ, ಆತ, "ನಾನೂ ಅಷ್ಟೆ; ಒಂದು ಬಿಡಿಕಾಸು ನನಗೂ ಚಂದಾ ವಸೂಲಾಗಲಿಲ್ಲ" ಎಂದು.

ಗೋಡೆ ಸಾಲು

ಆಶ್ಚರ್ಯ! ಅವಳ ಅಲಂಕಾರವೇ ಮೊದಲು ಪೂರ್ತಿಯಾದದ್ದು. ನನ್ನದೇ ತಡ.. ನನ್ನ ಷರ್ಟಿನ ಗುಂಡಿಗಳು ಮಂಗಮಾಯ. ಕೊನೆಗೆ ಗಡಿಯಾರದ ಸ್ಟ್ಯಾಂಡಿನಲ್ಲಿ ಸಿಕ್ಕಿದುವು. ಅಷ್ಟು ಎತ್ತರಕ್ಕೆ ಅವು ಹೇಗೆ ಹೋದುವು? ನನಗೆ ಎಟುಕುವುದಿಲ್ಲ.... ಇರಲಿ.... ಎಂದು ಕೋಟು ತಗುಲಿಸಿಕೊಂಡೆ. ಕರ್ಚೀಫ್ ಇದೆಯೆ ಇಲ್ಲವೆ, ಅಂತ ಕಿಸೆಯೊಳಗೆ ಕೈ ತುರುಕಿದೆ. ಇತ್ತು. ಆಗ ನೆನಪಾಯಿತು.. ಸಿನಿಮಾ ಥಿಯೇಟರ ಹತ್ತಿರ ಹೋಗಿ ಪೇಚಾಡಬಾರದಲ್ಲಾ.... ಐದು ರೂಪಾಯಿ ನೋಟು? .... ಆ?.... ಇಲ್ಲ! ಎಲ್ಲಿಗೆ ಹೋಯ್ತು?

ಹೆಕ್ಕತ್ತು ಕೆರೆದೆ. ಬುರುಡೆ ಕೆರೆದೆ.... ಉಗುರು ಕಚ್ಚಿದೆ. ಓ! ಲಕ್ಷ್ಮಣಯ್ಯನಿಗೆ ಮಧ್ಯಾಹ್ನ ಸಾಲ ಕೊಟ್ಟಿದ್ದೆ. ಅದರ ನೆನಪಿಲ್ಲದೆ, ಇವಳಿಗೆ ಸಿನಿಮಾ ಆಸೆ ತೋರಿಸಿ, ಇವಳ ಅಲಂಕಾರವೂ ಪೂರ್ತಿಯಾಗಿರುವಾಗ.... ಇನ್ನೇನು ಗತಿ?

"ಲೇ! ರೂಪಾಯಿ ಇಲ್ಲವಲ್ಲೆ!"

"ಪಕ್ಕದ ಮನೆ ರಾಜಮ್ಮನವರ ಹತ್ತಿರ ಸಾಲ ತೆಗೀತೇನೆ.... ಹಿತ್ತಲ ಗೋಡೆ ಕಡೆಯಿಂದ ಕೂಗಿದರೆ, ಬರುತ್ತಾಳೆ.... ಒಂದೇ ನಿಮಿಷ" ಅಂತ ನೆಗೆದಳು.


ರಾಜಮ್ಮನವರ ಕೈ ಬರಿದು; ಆದರೂ, ಆಕೆ ಅವರ ಹಿತ್ತಲ ಗೋಡೆಯಿಂದ ಆಚೆ ಮನೆ ಸೀತಮ್ಮನವರನ್ನು ಕೂಗಿ, ವಿಷಯದ ತುರುತನ್ನು ವಿವರಿಸಿ ೫ ರೂಪಾಯಿ ಸಾಲ ಕೇಳಿದಳು, ನನ್ನವಳಿಗಾಗಿ. ಹೆಂಗಸರಲ್ಲಿ ಎಂತಹ ಸಹತಾಪ ಬುದ್ಧಿ, ಎಂದು ನಾನು ಗದ್ಗದಿಸಿದೆ. ಆಕೆ, ಕೈ ಕೈ ಹಿಸುಕುತ್ತಾ, ಅದರಾಚೆ ಮನೆ ಸುಬ್ಬಮ್ಮನನ್ನ, "ಇಗೊ! ಲಕ್ಷ್ಮಮ್ಮನ ಹತ್ತಿರ ಇಸುಕೊಂಡು ಕೊಡುತ್ತೇನೆ ತಾಳಿ" ಎನ್ನುತ್ತಾ, ಅವಗ ಹಿತ್ತರ ಮನೆ ಗೋಡೆಗೆ ಧಾವಿಸಿದಳು. ಲಕ್ಷ್ಮಮ್ಮನಿಗೂ ಬರಗಾಲ, ಆದರೂ ಪರಿತಾಪ. "ಸರಸ್ವತಮ್ಮ, ಸರಸ್ವತಮ್ಮ" ಎಂಬ ಆರ್ತಧ್ವನಿಯಿಂದ ಆಕೆ ತನ್ನ ನೆರೆಯಾಕೆಯನ್ನು ಕೂಗಿದರು.

ನಾನೂ ಅವಳೂ ಗಡಿಯಾರದ ಮುಳ್ಳುಗಳನ್ನೇ ದಿಟ್ಟಿಸುತ್ತ ನಿಂತಿದ್ದೆವು. ಇಪ್ಪತ್ತೈದು ನಿಮಿಷ ನಡಿಗೆ, ೩ ನಿಮಿಷ ಟಿಕೇಟು ಕೊಂಡುಕೊಳ್ಳುವುದು, ೨ ನಿಮಿಷ

ಮೆಟ್ಟಲು ಹತ್ತುವುದು, ೨೨ ಮೆಟ್ಟಲುಗಳು, ಅವಳದು ಗಜಗಮನ, ನಂತರ ಕತ್ತಲಿಯಲ್ಲಿ ಸೀಟು ಹುಡುಕುವುದು, ಎರಡು ಸೀಟು ಒಟ್ಟಿಗೆ ಸಿಗಬೇಕು,....ಛೂ! ಆಗಲೇ ೫-೫೫....೫೮, ೬೦, ೬-೫ ...ಸಾಧ್ಯವಿಲ್ಲ! ೬-೧೦, ೧೨, ೧೫! ಆಗ, ಒಂದು ಐದು ರೂಪಾಯಿ ನೋಟು ಗೋಡೆಗಳನ್ನೆಲ್ಲ ಹಾರಿಕೊಂಡು ಅವಳ ಕೈಗೂ, ಅವಳಿಂದ ನನ್ನ ಕೈಗೂ ಬಂತು. ಪಕ್ಕದ ಮನೆ ಆಚೆ ಮನೆ ಕೊಟ್ಟದ್ದು, ಎಂತಲೇ ನಾವು ಅದನ್ನ ಸ್ವೀಕರಿಸಿದೆವು. ಆಕ್ಷಣವೇ ಮುಂಬಾಗಿಲು ನೂಕುತ್ತ ಲಕ್ಷ್ಮಣಯ್ಯ ಬಂದ. "ಅಯ್ಯ! ಇವತ್ತು ೬-೩೦ರ ಸಿನಿಮಾಗೆ ಹೋಗೋಣ ದಂಪತಿ ಸಮೇತ, ಅಂತ ನಿನ್ನ ಹತ್ತಿರ ೫ ರೂ. ಸಾಲ ತೆಗೆದಿದ್ದೆ. ಆದರೆ, ಗಂಟೆ....ಇದೇನಿದು? ನಿನ್ನ ಗಡಿಯಾರ? ತುಂಬಾ ಸ್ಲೋ....ಈಗ ೬-೪೦! ಚೆನ್ನಾಗಿದೆ... ಅವಳಿನ್ನೂ ರೆಡಿಯೇ ಆಗಿರಲಿಲ್ಲ. ನಾಳೆಯೋ ನಾಳದ್ದೋ ಹೋಗೋಣ ಅಂತ ತೀರ್ಮಾನಮಾಡಿದೆವು, ...ಆದರೆ, ನೀನು ಕೊಟ್ಟ ರೂಪಾಯಿಯನ್ನ ಸತ್ಪಾತ್ರಕ್ಕೆ ಸಾಲ ಕೊಟ್ಟಿದೇನೆ—ನಮ್ಮ ಈಚೆ ಮನೆಯಾಕೆ ತುರುತ್ತಾಗಿ ೫ ರೂ. ಬೇಕು ಅಂತ ಗೋಡೆ ಹತ್ತಿರ ಬೊಡಕೊಂಡಳು, ಅವಳಿಗೆ ಅವಳು ಕೊಟ್ಟಿದ್ದಾಳೆ ...ನಾಳೆ ವಾಪಸ್ಸು ಕೊಡಬಹುದು ....ಏನು? ಎಲ್ಲಿಗೋ ಹೊರಟುನಿಂತಿರುವ ಹಾಗೆ ಕಾಣುತ್ತದೆ, ಇಬ್ಬರೂ...." ಎಂದ.

ಎಲ್ಲಿಗೂ ಇಲ್ಲ, ಅಂತ ನಾನು ನನ್ನ ನೋಟನ್ನ ಕಿಸೆಯಲ್ಲಿ ಭದ್ರಮಾಡಿದೆ.

—ಬಾಟಾಳಿ.



ಲೋ—ಆ ಹಜಾರೆ, ಮಂಕಡ್ ಇವರಿಗೂ ಇನ್ನೂ ಚಾನ್ಸು ಯಾಕೆ ಕೊಡ್ತಾರೋ.

ಮುನಿಸು

(ನಾಗರಿಕ ಜನ ಪದ ಸಾಹಿತ್ಯ)

— o —

ಅರಿವಿ ಅರಿವಿ ಅಂತ ಅಂಗ್ಡಿ ಸಾಲಲೆದಾಡಿ
ಸೀರೇಲಿ ಮೂರ್ಮೊಳ ಅಳಕೊಂಡು | ಹರಿಕೊಂಡು
ಗಂಡ ಬುಷ್ ಕೋಟ್ನೆ ಹೊಲ್ಕೊಂಡ. ॥ ೧ ॥

ಬತ್ತೀನಿ ಬತ್ತಿನಂತ ಭರವಾಸೆ ಕೊಟ್ಟೋನು
ತತ್ತೀನಿ ಜೋಳೀಯ ಬಟ್ಟೀಃ | ಎಂದವನ
ಅಂಗಿ ಜೋಬೆಲ್ಲ ಬರಿ ತೂತು. ॥ ೨ ॥

ಜಾಣೆ ನಿನ್ನಾಣೆ ಜಗುಲಿ ಕಲ್ಲಿನ ಆಣೆ
ನಗಲಿ ನೆರೆ ಹೊರೆ ಸಿನಿಮಾಗೆ | ಖಂಡಿತ
ನಾಳೆ ಇಬ್ಬರೂ ಹೋಗೋಣ ॥ ೩ ॥

ಬತ್ತೀನೆಂತ್ಹೋಳೆ ಹೋಗೇಳು ದಿನವಾದೋ
ಊಟೆ ರೇಸಲ್ಲಿ ಕುದುರೆಯ | ಹಿಂದೋಡಿ
ಮಾನ ಕಳ್ಕೊಂಡು ಬರ್ತಾರೆ. ॥ ೪ ॥

ಕಾಲಾಗೆ ನಡೆಯುತ ಕಣ್ಬಿಡೋ ಹೆಣ್ಣಲ್ಲ
ಆಟೊ ರಿಕ್ಷಾನ ಟಾಕ್ಸೀನ | ತಕೊಂಡು
ಮಾವಯ್ಯ ಹಡೆದ ಮಗ ಬರಲಿ. ॥ ೫ ॥

ನೈಲಾನ ಸುತ್ತೆಂದೆ ಹಸುಮಗನ ತಾ ಎಂದೆ
ಎಸಳೆ ಮಲ್ಲಿಗೆ ಮುಡಿ ಎಂದೆ | ವಾಕಿಂಗ್‌ಗೆ
ಕಳಚಿದ್ದು ಕಾಲಿನ ಹೈ ಹೀಲ. ॥ ೬ ॥

ಜ॥ ತಿಮ್ಮರ್ಯ್ಯ!!

ಈರುಳ್ಳಿ ಬೇಳೆ ಹುಳಿ ಎಷ್ಟು ಚೆನ್ನಾಗಿತ್ತು ಅಂತೀರಿ? ಆ ಮರಾಟ್‌ಮಗ್ಗಿನ ಪ್ರಭಾವಾನೋ, ದಾಲ್ಚಿನ್ನಿಯ ಪ್ರಸಾದಾನೋ, ಏನೋ ಕಾಣೆ ಆವತ್ತಿನ ಹುಳಿ ಪಗದಸ್ತು.

ಶನಿವಾರ ಕಛೇರಿಯಿಂದ ನಡೆದು ಬಂದಿದ್ದೆ. ಆಫೀಸರು ಒಂಭತ್ತಕ್ಕೆ ಬಂದು ಅವರ ಆಫೀಸರನ್ನು ನೋಡಬೇಕು ಅಂತ ನಮಗೆ ಹೇಳಿ ಒಂಭತ್ತೂವರೆಗೆ ತಮ್ಮ ಮನೆಗೆ ಹೊರಟು ಹೋಗಿದ್ದರು. ಅವರ ಆಕೇಗೆ ಹಣಿಮೂರನೇ ಹೆರಿಗೆ ಕಾಲ. ಏನೋ ದುಗುಡ ಇದ್ದಿರಬೇಕು ಪಾಪ! ಆತನಿಗೆ. ಮುಖ್ಯ ನಮಗೆ ಖುಷಿ. ಅಂದು ಒಂದು ಬೈಗಳೂ ಇದ್ದಿಲ್ಲ. ಹಾಗಾಗಿ ಹೊಟ್ಟೆ ಹಾಯಾಗಿ ಹಸಿದಿತ್ತು.

ಮೇಲೆ ಈ ಹುಳಿ, ಊಟಕ್ಕೆ. ಬಡಿಸೋಳ ಕೈ ಸುಸ್ತಾಗೋ ಹಾಗೆ ತಿಂದೆ. ಸಾರನ್ನು ಕುಡಿದು, ಹುಳಿಯಲ್ಲೇ ಎರಡನೇ ಸಲ ಕಲಸಿಕೊಂಡು ತಿಂದೆ. ಮಜ್ಜಿಗೆ ಅನ್ನ ಕಲಸಿದೆ. "ನಂಚಿಕೊಳ್ಳುಕ್ಕೆ ಹುಳಿ ಹೋಳಿದ್ದರೆ ಹಾಕು" ಎಂದು ಆಣತಿ ಯನ್ನು ಹೃದಯಂಗಮವಾಗಿ ಹಾವ ಭಾವ ವಿಲಾಸಗಳೊಂದಿಗೆ ಇತ್ತೆ. ಆಣತಿ ಮುಗಿಯುವ ಮೊದಲೇ ಆಕೆ ಘರಮಾಗರ ಸಚಿವ ಸಂಡಿಗೆ ತಂದು ಬಡಿಸಿದಳು.

ಈ ಸಂಡಿಗೆಯಲ್ಲಿ ನೋಡಿ! ಮನುಷ್ಯ ವರ್ಗದಲ್ಲಿದ್ದಂತೇ ತರಹಾವಾರಿ ಉಂಟು. ರಾಜ ಸಂಡಿಗೆ ನೋಡಲು ಚೆನ್ನ. ಅಚ್ಚ ಅರಳಿನಿಂದ ಮಾಡಿದ್ದು. ತುಪ್ಪದಲ್ಲೇ ಕರಿಯುತ್ತಾರೆ. ಹಲ್ಲಿಗೆ ಹಿತ, ಆದರೆ ನಾಲಿಗೆಗೆ ಸಪ್ಪೆ. ಸೆಕ್ರೆಟರಿ ಸಂಡಿಗೆ ಬೇಯಿಸಿದ ಭತ್ತದಿಂದ ಮಾಡುತ್ತಾರೆ ಮಡಿ ಸಾಲದು ಅಂತ ಮದುವೆ ಮನೆಗೆ ನಿಷೇಧ. ಆದರೆ ಹಲ್ಲಿಗೂ ಚೆನ್ನ. ನಾಲಿಗೆಗೂ ಹಿತ. ಆದರೂ ಏನೋ ಒಂದು ರೀತಿಯ ನಪುಂಸಕತ್ವ ಕಾಣಬರುತ್ತೆ. ನೌಕರ ಸಂಡಿಗೆ ಹೋಟಲಲ್ಲಿ ಬಡಿಸು ವಂತಹದು. ಆಳಿಗೆ ಆಕಾರ ಇದ್ದ ಹಾಗೆ ಸಂಡಿಗೆ ರೂಪ, ಸಂಡಿಗೆ ವೇಷ. ಬಾಯಿಗೆ ಹಾಕಿದರೆ ಮಣ್ಣು ತಿಂದ ಹಾಗಿರುತ್ತೆ. ಅಲ್ಲಿಗೇ ಅಂಟಿಕೊಳ್ಳುತ್ತೆ.

ಆದರೆ ನೋಡಿ, ಸಚಿವ ಸಂಡಿಗೆ, ಬಲು ಹಸನಾದದ್ದು. ಸ್ವಲ್ಪ ಇಂಗು ಮುಂದಿರಬಹುದು, ತಕ್ಕಮಟ್ಟಿಗೆ ತೂಕದ ಶರೀರ. ನೋಡಲು ಬಲು ಅಂದ, ರುಚಿ ನೋಡಲು ಬಲು ಚೆಂದ, ಒಮ್ಮೆ ಇದರ ಸಹವಾಸವಾದರೆ ಸಾಯೋತನಕ ಮರೆಯೋದಿಲ್ಲ.

ನನ್ನಾಕೆ, ಇಂತಹ ಸಚಿವ ಸಂಡಿಗೆಯನ್ನು ಮಜ್ಜಿಗೆ ಅನ್ನಕ್ಕೆ ಬಡಿಸಿದಳು — ನಂಜಿಕೊಳ್ಳುಕ್ಕೆ—!!

ಅತ್ತೆ! ನಿರರ್ಗಳವಾಗಿ ಕಣ್ಣೀರ ಸುರಿಸಿದೆ.

ಗೊಳೋ! ಅಂತ ಅತ್ತೆ. ಮಜ್ಜಿಗೆ ಅನ್ನವನ್ನೂ, ಸಚಿವ ಸಂಡಿಗೇನೂ ನೋಡುತ್ತಾ ಅತ್ತೆ.

* * *

"ಯಾಕಂದ್ರೇ! ಹೀಗೆ ಅಳುತ್ತೀರಿ, ಅನ್ನದೆದುರಿಗೆ. ನಿಮ್ಮಮ್ಮ ಮಾಡಿದ ಸಂಡಿಗೆ ಜ್ಞಾಪಿಸಿಕೊಂಡು, ಅಮ್ಮ ಇಲ್ಲವಲ್ಲಾ ಎಂದು ಅಳುತ್ತಿದ್ದೀರಾ" ಎಂದಳು, ದೀನ ದನಿಯಿಂದ;—ನನ್ನಾಕೆ.

* * *

ಪಂಚೆ ತುದಿಯಿಂದ ಮೂಗು ಒರೆಸಿಕೊಂಡು, ಗದ್ಗದ ದನಿಯಿಂದ ಹೇಳಿದೆ "ನಮ್ಮಮ್ಮಾ ಇಲ್ಲವಲ್ಲಾ ಅಂತ ಅಳುತ್ತಿಲ್ಲ! ನೀನು ಇದೀಯಲ್ಲಾ ಅಂತ ಅಳುತ್ತಿದ್ದೇನೆ. ಸಚಿವ ಸಂಡಿಗೆ ಮಾಡಿ, ಈರುಳ್ಳಿ ಹುಳಿ ಅನ್ನ ತಿನ್ನುವಾಗ ಬಡಿಸದೆ, ಈ ಪೇಟೆ ನೀರು ಮಜ್ಜಿಗೆ ಅನ್ನಕ್ಕೆ ಬಡಿಸಿದೆಯಲ್ಲಾ! ರಾಕ್ಷಸೀ! ನೀನು ಇರುವುದಕ್ಕೆ ಅಳುತ್ತಿದ್ದೇನೆ," ಎಂದು ಕಾಷಾಯ ಕಳೆದುಕೊಂಡ ಸನ್ಯಾಸಿಯಂತೆ ಅತ್ತೆ. ಕರಡಿಯಂತಿರುವ ಗಂಡಸು ನಾನು, ಕೋಮಲ ಕನ್ಯೆಯಂತೆ ಅತ್ತೇಬಿಟ್ಟೆ.

ಅಳುತಾ ಅಳುತಾ ಬಡಿಸಿದ್ದನ್ನೆಲ್ಲಾ ತಿಂದೂಬಿಟ್ಟೆ. ಆಮೇಲೇ ನನಗೆ ಗೋಚರವಾಗಿದ್ದು; ಬಡಿಸಿದಾಕೆ ಎಲ್ಲೂ ಕಾಣಿಸಲಿಲ್ಲ ಅಂತ. "ಲೇ" ಅಂದೆ. ನಿರುತ್ತರ. ದೊಡ್ಡಕ್ಷರದಲ್ಲಿ "ಲೇ" ಅಂದೆ. ನಿಶ್ಯಬ್ದ. ಎದ್ದು, ಬಚ್ಚಲ ಮನೆಗೆ ಹೋಗಿ ಕೈ ತೊಳೆದುಕೊಂಡು ಟವಲು ತರುವವರು ಇಲ್ಲದ್ದರಿಂದ, ಪಂಚೆ ತುದಿಯಲ್ಲೇ ಕೈ ಒರೆಸಿಕೊಂಡು ಶಬ್ದಮಾಡದೇ, ಅಡಿಗೆ ಮನೆ ಬಾಗಿಲಲ್ಲಿ ನಿಂತು ಇಣಿಕಿ ನೋಡಿದೆ.

ನಮ್ಮಾಕೆ,—ಛೂ, ಬಿಡ್ತು,—ನನ್ನಾಕೆ, ಊಟಮಾಡ್ತಾ ಕೂತಿದ್ದಳು.

ತಾನು ಮಾತ್ರ ಈರುಳ್ಳಿ ಹುಳಿ ಅನ್ನದ ಜತೆಗೆ ಸಚಿವ ಸಂಡಿಗೆ ಬೇಕಾದಷ್ಟು ಬಡಿಸಿಕೊಂಡು ತಿಂದುಬಿಡುತ್ತಾಳೆ, ನನಗೆ ಮಜ್ಜಿಗೆ ಅನ್ನಕ್ಕೆ ಸಂಡಿಗೆ ಬಡಿಸುತ್ತಾಳಲ್ಲಾ ಅಂತ ಕೋಪ ಉಕ್ಕೇರಿ ನನ್ನ ಪಾಡಿಗೆ ನಾನು ನನ್ನ ಕೊಠಡಿ ಸೇರಿಕೊಂಡೆ.

* * *

ಶನಿ, ಭಾನು, ಸೋಮ, ಮಂಗಳ; ಮಾತು ಕೂಡ ಆಡಲಿಲ್ಲ.

ಆಗಲೇ ನನಗನಿಸಿದ್ದು. ಜ! ತಿಮ್ಮಯ್ಯ ಕೊರಿಯಾದಿಂದ ಇಲ್ಲಿಗೆ ಬಂದು ನಮ್ಮಲ್ಲಿನ ಪರಸ್ಪರ ಸೆರೆ ಬಿಡಿಸಲು ಪೀಠಿಕೆ ಹಾಕಿದ್ದರೆ ಚೆನ್ನಾಗಿತ್ತಲ್ಲವೇ? ಎಂದು. ಇಲ್ಲಾದರೂ ಆತ ಕೃತಕೃತ್ಯನಾಗುತ್ತಿದ್ದನಲ್ಲಾ ಎಂದು.

ಬುಧವಾರ ಜ|| ತಿಮ್ಮಯ್ಯ ನಮ್ಮ ಮನೆಗೆ ಕಾಗದದ ರೂಪಿನಲ್ಲಿ ಬಂದ. ಆಕೆಯ ತಮ್ಮ ನಮ್ಮೂರಲ್ಲಿ ಏನೋ ಕೆಲಸದ ಕಾರಣ ಬರುವನೆಂದೂ ಎರಡು ದಿನ ಇರುವನೆಂದೂ, ಕಾಗದ ಬಂತು. ಆ ಕಾಗದ ನನಗೆ ಬಂದಿತ್ತು. ಅದನ್ನು ಅವಳ ಕೈಗೆ ಸಂಜೆ ಅರ್ಪಿಸಿದೆ

"ಎಷ್ಟುದಿನ ಆಯ್ತು ಅಂದರೆ, ಚಂದೂ ನೋಡಿ" ಎಂದು ಅಂದಳು. ನಾಲ್ಕು ದಿನಗಳಿಗೆ ಅದೇ ಮೊದಲ ಮಾತು ಅವಳದು.

"ಸುಮಾರು ತೊಂಭತ್ತು ದಿನ ಆಗಿರಬಹುದು" ಎಂದೆ. ಅದೇ ನನ್ನ ಮೊದಲ ಮಾತು ನಾಲ್ಕು ದಿನಗಳಿಗೆ.

ಇಬ್ಬರೂ ನಕ್ಕೆವು. "ಮಸಲಾ ಸಂಡಿಗೆ ಬಡಿಸಲು ಮರೆತರೆ ಇಷ್ಟು ರೇಗಾಟವೇ?" ಎಂದಳು ಹುಸಿನಗೆ ನಗುತ್ತಾ.

"ಸಂಡಿಗೆ ಬಡಿಸಲು ಮರೆತೇಹೋಗಿದ್ದರೆ ದುಃಖವಾಗುತ್ತಿದ್ದಿಲ್ಲ. ಸಲ್ಲದ ಹೊತ್ತಿಗೆ ಬಡಿಸಿದಾಗ ಅಳು ಬಂತು. ಆ ಮೇಲೆ ನೋಡಿದರೆ ನೀನು ಪುಷ್ಕಳ ಉಣ್ಣುತ್ತಿದ್ದೆ. ಇನ್ನೂ ದುಃಖವಾಯ್ತು" ಅಂದೆ.

"ಅಯ್ಯೋ!" ಅಂದಳು.

"ಅಯ್ಯೋ! ಅದೇ ವಾಸನೆ ಅಡಿಗೆ ಮನೆಯಲ್ಲಿ" ಎಂದಳು.

"ಮೂರು ದಿನದಿಂದ ಯಾಕೆ ಅಡಿಗೆ ಮನೆಯಲ್ಲಿ ಈ ದುರ್ವಾಸನೆ ಅನ್ನೋದು ಈಗ ತಿಳಿಯಿತು" ಅಂದಳು.

ಅನ್ನುತ್ತಾ ಅಡಿಗೆ ಮನೆಗೆ ಓಡಿದಳು, ಆನೆ ಮದುವೆಯ ಮೆರವಣಿಗೇಲಿ ಆನೆ ಓಡುವಂತೆ. ನಾನೂ ಹಿಂಬಾಲಿಸಿದೆ. ಅಡಿಗೆ ಮನೆಯಲ್ಲಿ ಏನೋ ದುರ್ವಾಸನೆ.

ಒಲೆ ಮೇಲಿನ ಬಡುವಿನ ಮೇಲೆ ಒಂದು ಡಬರಿ. ಅದರ ಮೇಲೆ ಒಂದು ತಟ್ಟೆ ಮುಚ್ಚಿದೆ ಅದನ್ನು ತೆಗೆದಳು. ಅಲ್ಲಿಂದಲೇ ಆ ದುರ್ವಾಸನೆ.

ನನ್ನನ್ನು ನೋಡಿದಳು. "ನೋಡಿ ಅಂದರೆ ಅವತ್ತು ನೀವು ಅತ್ತಾಗ ನನಗೂ ಅಯ್ಯೋ! ಮರವೇ ಎನ್ನಿಸಿತು. ಅದಕ್ಕೇ ಅವತ್ತು ಕರಿದ ಸಂಡಿಗೆಯನ್ನು ನಾನು

ಬಡಿಸಿಕೊಳ್ಳಲೂ ಇಲ್ಲ ಅದನ್ನು ಮುಸುರೆಯವಳಿಗೆ ಹಾಕಲೂ ಮರೆತೆ. ಏನು ಈ ಕಮಟು ವಾಸನೆ ಅಡಿಗೆ ಮನೆಯಲ್ಲಿ ಎಂದುಕೊಂಡೆ. ಈಗ ತಿಳಿಯಿತು ನೋಡಿ" ಎಂದಳು.

ಡಬರಿ ಅರ್ಧದಷ್ಟು ಕರಿದು ಕಮಟಾದ ಸಂಡಿಗೆ.

"ಅಯ್ಯೋ! ಅಂತಹಾ ಸಂಡಿಗೆ ಅಂತಹಾ ಈರುಳ್ಳಿ ಹುಳಿ ಜತೆಗೆ ನೀನಾದರೂ ತಿಂದಿದ್ದರೆ, ಸಕಾರಣವಾಗಿ ನಾನಾದರೂ ರೇಗುತ್ತಿದ್ದನಲ್ಲೇ!! ಅದಕ್ಕೂ ಅವಕಾಶ ಕೊಡದೆ ನನ್ನ ಹೊಟ್ಟೇನ ಸಂಕಟ ಪಡಿಸುತ್ತೀಯಲ್ಲೇ" ಎಂದು, ಅವಳು ಮರು ಮಾತಾಡದಂತೆ ಮಾಡಿದೆ.

—"ಬಕ್ರ".



ತುಂಬಾ ರೆಸ್ಟ್ ಬೇಕು—ನಾಳೆಯಿಂದ್ಲಾ ಆಫೀಸಿಗೇ ಹೊರಟುಬಿಡಿ.

ನರಗುರಿ

—— o ——

ಅಣ್ಣ ಕುಳಿತಿಹ ಸ್ಕ್ರೀನಿನಾಕಡೆ ಎಂದು ಅರಿಯದ ನರಗುರಿ
ನಾನು, ಹೇಳಿದೆ "ಪ್ಲೀಸ್ ಪ್ಲೇಯರ್ಸ್" ಎಂದು ಹೋಟಲ ಮಾಣಿಗೆ
ಗಮಗಮಿಸುತಿಹ ಪಲ್ಯ ಬೆಣ್ಣೆಯ ದೋಸೆಯನು ನಾಂ ಮುಗಿಸುತೆ;
ಕೈಯ ಹಚ್ಚಿದೆ ವಿಜಯ ಕೆಫೆಯಾ ಸ್ಟಿಮ್ಯುಲೇಟಿಂಗ್ ಕಾಫಿಗೆ.
ಬಲಕೆ ಕಾಫಿ, ಎಡಕೆ ಪ್ಲೇಯರ್ಸ್, ಮೇರೆ ಇರುವುದೆ ಸೌಖ್ಯಕೆ?
ಮೂರು ಲೋಕಕೆ ಪ್ರಭುವೆನಾನೆಂದೆಂದು ಬಗೆದೆನು ಮೂರ್ಖನು!
ಕರುಬನಹವಿಧಿ ನನ್ನ ಹಿಂದೆಯೆ ನಕ್ಕಿತೆಂದಾನರಿಯೆನು.
ವಿಜಯ ಕೆಫೆಯಾ ಕಾಫಿ ಲೋಕದ ವಿಭವವೆಲ್ಲವ ಮೆಟ್ಟಿದೆ;
ಪ್ಲೇಯರಸಿನಾ ಫ್ಲೇವರಿನ ಮುಂದುಳಿದುದೆಲ್ಲವು ಗೊಬ್ಬರ.
ಸ್ಫೂರ್ತಿ ಏರಿತು ತಲೆಗೆ, ಧೂಮವು ಛಾವಣಿಯ ಬಳಿಗೇರಿದೆ.
ಪಾಂಡವರು ಪಳರಾಜ್ಯ ದೊರತಂದೆನ್ನ ಮೋಜನು ಕಾಣರು.
ಮೂಲೆಯಲ್ಲಿಹ ಮರ್ಫಿ ರೇಡಿಯೋ ತಲತಮುಹಮದ ಮೆಲೊಡಿಯ
ಸ್ಕ್ರೀಚಿ; ಲೌಡ್ ಸ್ಪೀಕರಿನ ಮೂಲಕ ವ್ಯೋಮವೆಲ್ಲವ ತುಂಬಿದೆ.
ಒಂದೆ ಫಾಲ್ಟ್, ಪ್ಲೇಯರ್ಸು ಟೊಬೆಕೊ ಬೇಗ ಸುಡುವುದು ಎಂಬುದೇ
ಆಗಲೇ ಅಕ್ಷರದ ಬಳಿಯಲಿ ಸುಳಿಯುತಿರುವನು ಅಗ್ನಿಯು.
ಅಯ್ಯೊ! ಕಾಣುವುದೇನು? ಸ್ಕ್ರೀನಿನ ಬಟ್ಟೆಯಾ ಮೇಗಡೆಯಲಿ
ಕಪ್ಪುಟೋಪಿ! ಕೆಂಡಗಣ್ಣು! ಅಣ್ಣನಾ ಗಿಳಿಮೂಗು ತಾಂ!
ಒತ್ತಿ ಒತ್ತಿದೆ ಧೂಮರಾಶಿಯ ತುಟಿಯ ಮುಚ್ಚುತ ನುಂಗಿದೆ.
ಅನ್ನದಾತನು ಅಣ್ಣನೋಡಿದ ಕ್ವೇರಿ ಸಂಸ್ಪೈಟಿಂದಲಿ.
ಹಾಳು! ಸೀನೆಲ್ಲಿತ್ತೊ? ಸಪ್ರೆಸ್ ಮಾಡಲಾರೆನು! ಸೀನಿದೆ!
ಹಕ್ಷಿ! ಬಾಯಲಿ ಧೂಮ! ಭೈರವನಣ್ಣ! ಅಯ್ಯೋ ಕೋವಾಡಿಸ್?
ಕಣ್ಣಮುಚ್ಚಿದೆ, ಬೆರ್ಟಿವೂಸ್ಟರನಂತೆ ಅಂಕಲಿಸಿದಿರಲಿ.

—ಅ. ರಾ. ಸೆ.

ಅ. ಭಾ. ಅತ್ತೆಯರ ಸಂಘ

ಜರೀಮುಸುಕಿನ ಸುಬ್ಬಮ್ಮನೋರು, ಪ್ರೀತಿಯ ಸೊಸೆಗೆ ಕಷ್ಟವಾಗಬಾರದು ಎಂದು ಅಡಿಗೆ ಮನೆಯ ಪಾರುಪತ್ಯವನ್ನೆಲ್ಲಾ ತಾವೇ ನೋಡಿಕೊಳ್ಳುತ್ತಿದ್ದರು. ಸೊಸೆ ಅಡಿಗೆಮನೆ ಹೊಸಲನ್ನೂ ದಾಟಿರಲಿಲ್ಲ. ತೋಟದ ಹೂವನ್ನೂ ದಂಡೆಕಟ್ಟಿ ತಾವೇ ಸೊಸೆಗೆ ಮುಡಿಸುತ್ತಿದ್ದರು. ಇದರ ಫಲ ಏನಾಯ್ತು ಗೊತ್ತೆ? "ಅತ್ತೆಮ್ಮನವರು ಉಗ್ರಾಣಕ್ಕಾಗಲೀ, ಅಡಿಗೆ ಮನೆಗಾಗಲಿ, ತೋಟಕ್ಕಾಗಲಿ ನಾನು ಹೋಗಲೇ ಬಾರದು" ಎಂದು ಆಜ್ಞೆ ಇತ್ತು ನನ್ನ ಗೋಳು ಹುಯ್ದುಕೊಳ್ಳುತ್ತಾರೆ ಎಂದು ಸೊಸೆಯು ಅಪವಾದ ಹೊರಿಸಿದಳು.

ಸುಬ್ಬಮ್ಮನೋರು ಎಲ್ಲಾ ಬೀಗದ ಕೈಗಳನ್ನೂ ಸೊಸೆಯ ಕೈಲಿಟ್ಟು ಮಗಳ ಮನೆಗೆ ಹೋದರು. ನಳಿನಿ ತಾಯಿಯನ್ನು ಬಲು ಪ್ರೀತಿಯಿಂದ ಆದರಿಸಿದಳು. ಆದರೆ ಸುಬ್ಬಮ್ಮನವರಿಗೆ ಒಂದುರಾತ್ರಿ ಕೇಳಿಸಿತು "ನನಗೆ ತಾಳಿಕಟ್ಟಿದೆನೇ ಹೊರತು ನಿಮ್ಮಮ್ಮನಿಗಲ್ಲನಲ್ಲಾ" ಎಂದು ಅಳಿಯಂದಿರು ಹೇಳಿದ್ದು. ಮಾರನೆ ದಿನ ಬೆಳಗ್ಗೆ ಹೊಳೆಗೆ ಸ್ನಾನಕ್ಕೆ ಹೋದಾಗ ಊರಿಂದ ಬಂದಿದ್ದ ಪಾರ್ವತಮ್ಮ ಸುಬ್ಬಮ್ಮನನ್ನು ಆಕ್ಷೇಪಿಸಿದರು "ಅಲ್ಲಿ ಸೊಸೆ ಒಬ್ಬಳೇ ಒದ್ದಾಡುತ್ತಿದ್ದರೆ, ಇಲ್ಲಿ ಮಗಳಮನೆಯಲ್ಲಿ ನೀವು ಮಸ್ತಿಮಾಡ್ತಾ ಇರೋದೇ" ಎಂದು.

* * *

ರಾಜಮ್ಮನವರಿಗೆ ಕಾವಿವರ್ಣದ ಮೇಲೆಯೇ ಪ್ರೀತಿ. ಸುಖವಾಗಿ ಕಾವಿ ಮುಸುಕು ಸರಿ ಮಾಡಿಕೊಂಡು ಸಾಯಂಕಾಲ ಸದಾಶಿವನ ಪುರಾಣಕ್ಕೆ ಹೊರಟ ವೇಳೆಗೇ, ಸೊಸೆ ಮಂಜೂ ಟೆನ್ನಿಸ್ ಟೋರ್ನಮೆಂಟಿಗೆ ಹೊರಟಳು. "ರಾಜೇಂದ್ರ ನಿಗೆ ಕೆಂಡಾಮುಂಡಲ ಜ್ವರ, ಅತ್ತೆಮ್ಮನವರೇ ನೋಡಿಕೊಳ್ಳಿ" ಎಂದು ಹೇಳಿ ಮಂಜೂ ಹೊರಟೇ ಬಿಟ್ಟಳು. ರೇಗಿದ ರಾಜಮ್ಮ ತಾನೂ ಪುರಾಣಕ್ಕೆ ಹೊರಟೇ ಬಿಟ್ಟಳು. ಮಗ ರಾಜಮ್ಮನಿಗೆ ಮಾರನೆಯದಿನ ಹೇಳಿದ "ಅಮ್ಮ! ಮಗುವೇನೋ ಈಗ ಹುಷಾರಾಗಿದೆ ಆದರೆ ನಿನ್ನೆ ಅದೊಂದನ್ನೇ ಬಿಟ್ಟು ಹೇಗಮ್ಮ ಪುರಾಣಕ್ಕೆ ಹೋದೆ" ಅಂತ

ರಾಜಮ್ಮ ಸುಬ್ಬಮ್ಮ ಈಗ 'ಅಖಿಲಭಾರತ ಅತ್ತೆಯರ' ಸಂಘವನ್ನು ಸ್ಥಾಪಿಸಿದ್ದಾರೆ. ಅಧ್ಯಕ್ಷಿಣಿಯಾಗಲು ಅಮೃತಕೌರೇ, ಕೃಷ್ಣಾಹತೀಸಿಂಗೇ, ವಿಜಯಲಕ್ಷ್ಮಿ ಪಂಡಿತೇ, ಹೆನ್ನಾಸೇನೇ, ಅಥವಾ ಎಂ. ಆರ್. ಲಾನೇ ಅಂತ ಯೋಚಿಸುತ್ತಾ ಇರುವರಂತೆ. ಅಖಿಲಭಾರತ ಸಂಸ್ಥೆಗಳ ಪೋಟೋಗ್ರಾಫರು ಬೆಂಬಲ ಕೊಡುತ್ತಾರಂತೆ ಪಂಚವಾರ್ಷಿಕ ಪ್ಲಾನಿನಲಿ ಅ. ಭಾ. ಅ. ಸಂಘದ ಏಳಿಗೆಗಾಗಿ ಏಳುಲಕ್ಷ ರೂಪಾಯಿ ಮೀಸಲಾಗಿಸಿದ್ದಾರಂತೆ.

ಜೈ! ಅ. ಭಾ. ಅ. ಸಂಘ.

—"ಜಯಶ್ರೀ"

"ಚಲ್ ಚಲ್‌ರೆ ನೌಜವಾನ್"

ಶಿವಮೊಗ್ಗ ಹೊಸ ರೈಲ್ವೆ ಸ್ಟೇಷನ್ನಿನಲ್ಲಿ ಅವತ್ತು ನೂಕುನುಗ್ಗಲು ಜಾಸ್ತಿ. ಸಾಗರದ ಕಡೆಯಿಂದ ರೈಲು ಬಂದ ಕೂಡಲೆ ನಾವು ಮೂವರೂ ಒಂದು ಗಾಡಿಹತ್ತಿ "ಮುಂದಿನ ಗಾಡಿಗೆ ಹೋಗಿ, ಬೇಕಾದಷ್ಟು ಜಾಗಾ ಇದೆ"—ಎಂಬ ಸದುಪದೇಶ ಕೊಟ್ಟ ವೃದ್ಧ ಮಹನೀಯರ ಪಕ್ಕದಲ್ಲಿಯೇ ವಕ್ರಿಸಿದೆವು. ಸೀಟಿನ ಮೇಲೆ ಮಲಗಿದ್ದ ಕೈ ಚೀಲಗಳೂ, ಬಾಸ್ಕೇಟುಗಳೂ ಕೆಳಗಿಳಿಯುವಂತೆ ಮಾಡಿ ಹೇಗೋ ಜಾಗ ಮಾಡಿಕೊಂಡು ಕಷ್ಟದಿಂದ ಕೂತುಕೊಳ್ಳುವಾಗ "ಒಬ್ಬರು ಮುಂದಿನ ಸೀಟಿಗೆ ಹೋಗಿ" —ಎಂದು ಯಜಮಾನರು ಊರುಗೋಲನ್ನು ಉದ್ದೇಶಿಸಿ ಹೇಳಿದರು. ನಾವು ಒಬ್ಬರನ್ನೊಬ್ಬರು ನೋಡಿಕೊಂಡೆವು. ಮುಂದಿನ ಸೀಟಿನವರು ಹಲ್ಲು ಕಡಿದರು. ಆದ್ದರಿಂದ ಮೂವರೂ ಒಟ್ಟಿಗೇ ಕುಳಿತೆವು.

ಈ ಗಲಭೆಯಿಂದಾಗಿ ಕೊಂಚ ಮಾತು ನಿಲ್ಲಿಸಿದ ನೌಜವಾನ್. ಒಬ್ಬ ಮತ್ತೆ ಮಾತಿಗೆ ತೊಡಗಿದ. ಮೊದಲು ನಮಗೆ ತನ್ನ ಪರಿಚಯ ಮಾಡಿಸಿಕೊಟ್ಟ. ಮಲೆನಾಡ ಕಡೆ ಅಂತೆ. L. S. ಪಾಸಾಗಿದಾನಂತೆ. ಈಗ 'ಬಿಜಿನೆಸ್' ಅಂತೆ. ನಮ್ಮ ಸೀನಿ ಕೈಯ್ಯಲ್ಲಿ "Man Eaters of Kumaon" ಪುಸ್ತಕವಿತ್ತು. ಅದಕ್ಕೆ ಕೈಹಾಕಿ "ಫೈವ್ ಮಿನಿಟ್ಸಲ್ಲಿ ಪೇಜ್ ಟರ್ನ್ ಮಾಡಿ ಕೊಡ್ತೀನಿ ಸಾರ್"—ಎಂದು ಹಲ್ಲುಕಿರಿದ. ಆ ರಾತ್ರಿಯಲ್ಲಿಯೂ ಹಾಕಿಕೊಂಡಿದ್ದ ಬಿಸಿಲು ಕನ್ನಡಕವನ್ನು ಕೋಟಿನ ಕಿಸೆಗೆ ಸೇರಿಸಿ ಪುಟ ತಿರುವಿದ. "ಎಲ್ಲಾ ಟೈಗರುಗಳ ಸಮಾಚಾರ; ಶಿಕಾರಿ ನ್ಯೂಸ್ ಅಂತ ಕಾಣುತ್ತೆ"—ಅಂದ. "ಟೈಗರ್ ಹಂಟಿಂಗ್ ಏನಿದ್ರೂ ನಮ್ಕಡೆ ಸಾರ್"—ಅಂತ ತೊಡಗಿದ ನೋಡಿ. ರೈಲು ಹೊರಡುವುದಕ್ಕಂತೂ ಬಹಳ ಸಮಯವಿತ್ತು. ಮಹಾರಾಯ ಒಂದೇ ಸಮನೆ ಬೋರ್ಗರೆದ. ಗುಂಡು ಹಾರಿಸಿದ. ಅವರೂರಿನ ಸಮೀಪದ ಜಂಗ್ಲೀಕಾನಿನಲ್ಲಿರುವ ಹುಲಿಗಳೆಲ್ಲಾ ಇಪ್ಪತ್ತಡಿಗೆ ಕಡಮೆಯಿಲ್ಲದವುಗಳೆಂದು ಪ್ರಾರಂಭಿಸಿ, ಆ ಕಡೆ ಶಿಕಾರಿಗಳು ಒಂದೇ ಏಟಿಗೆ ನಾಲ್ಕು ಹುಲಿಗಳನ್ನು "ಡೌನ್" ಮಾಡಿದ ಕಥೆಗಳನ್ನೆಲ್ಲಾ ಹೇಳಿದ.

ನಿಮ್ಮೂರಿನ ಹುಲಿಗಳಿಗೆ ಎರಡೇ ಕಣ್ಣುಗಳೇ ಎಂದು ಸೀನಿ ಕೇಳಿದಾಗ "ಹೌದು ಸಾರ್, ಎರಡೇ. ಆದರೆ ಒಂದೊಂದು ಕಣ್ಣೂ ಥೌಸಂಡ್ ಕ್ಯಾಂಡಲ್ ಎಲೆಕ್ಟ್ರಿಕ್ ಬಲ್ಬಿದ್ದ ಹಾಗೆ! ಲೈಟ್ನಿಂಗ್ ಹೊಳೆದ ಹಾಗೆ!"—ಎಂದ.

ಆ ಮೇಲೆ ಆ ಊರಿನ ಜೋಯಿಸರು—ಅವರೀಗ “dead ಉ”—ಅವರು ಹುಲಿ ಹಿಡಿಯುವ ಕ್ರಮಾನ ವರ್ಣಿಸಿದ. ಆತ ಹೇಳಿದ ಹಾಗೆ “ಜೋಯಿಸರ ಪ್ಲಾನೆಲ್ಲ ಸ್ಪೆಷಲ್ಲೇ ಸ್ಪೆಷಲ್ಲು!” ಅಮಾವಾಸ್ಯೆ ದಿನ ಆಂಜನೇಯನ ಪೂಜೆಮಾಡಿ ತೀರ್ಥಾನ ಪಂಚಪಾತ್ರೇಲಿ ತೆಗೆದುಕೊಂಡು “ಫಾರೆಸ್ಟ್‌ಗೆ” ಹೋಗಿಬಿಡೋರಂತೆ, ಜೋಯಿಸರು. ಹುಲಿ ಬರುವ ದಾರಿಯಲ್ಲಿ ಒಂದು ‘ಟ್ರೀ’ನ ಹತ್ತಿಬಿಟ್ಟು ಹುಲಿಗಾಗಿ ಹೊಂಚುಹಾಕ್ತ ಕೂತುಕೊಳ್ಳೋರಂತೆ. “ಆವಾಗ ಇಪ್ಪತ್ತೆರಡಡಿ ಮ್ಯಾನ್ ಈಟರು—ಮ್ಯಾನ್ ಏನು ಬಂತು ವಿಮೆನ್, ಬಾಯ್, ಗರ್ಲ್, ಚೈಲ್ಡ್, ಎತ್ತೂಸ್, ದನಾಸ್, ಸಿಕ್ಕಿದರೆ ಎಲ್ಲಾನೂ ಕಬಳಿಸೋ ಈಟರು—ಅಂದ್ರೆ ಹುಲಿ” ಬರುತ್ತೆ. ಮರದಡಿ ಬರುವಾಗ ಜೋಯಿಸರು ಒಂದು ಉದ್ಧರಣೆ ತೀರ್ಥಾನ ಅದರ ತಲೆಮೇಲೆ ಬಿಟ್ಟುಬಿಡೋರು. ಆಂಜನೇಯನ ಪ್ರಭಾವ! ಹುಲಿ ಥಂಡಾ ಆಗಿ ಅಲ್ಲೇ ನಿಂತು ಬಿಡುತ್ತೆ. ಅದರ ತಾಕತ್ತೆಲ್ಲ ಒಂದೇ ಏಟ್ಗೆ ಹೊರಟುಹೋಗುತ್ತೆ. ಅಷ್ಟೊತ್ತಿಗೆ ಜೋಯಿಸರು ಟ್ರೀಯಿಂದ ಜಂಪ್‌ಮಾಡಿ ಹುಲಿ ಹತ್ತಿರಕ್ಕೆ ಬಂದು ಒಂದು ಕೈಲಿ ಅದರ ಕಿವೀನ ಹಿಡಿದು, ಪಂಚಪಾತ್ರೆಲಿರೋ ತೀರ್ಥಾನ ಅದರ ಬುರುಡೆ ಮೇಲೆ ಸುರಿದು ಉದ್ಧರಣೆಯಿಂದ ಠಣ್, ಠಣ್, ಠಣ್—ಅಂತ ಮೂರು ಸಲ—‘ಥ್ರೀ ಟೈಮ್ಸ್’ ಅದರ ನೆತ್ತಿಗೆ ಬಡಿದರೆಂದರೆ ಸರಿ—ಹುಲಿ ಕಿರ್ರ್ರೋ ಅಂತ ಕಿರಿಚಿ ಧೊಪ್ ಅಂತ ಕೆಳಗೆ ಬೀಳ್ತಾ ಇತ್ತಂತೆ. ಆ ಮೇಲೆ ಜೋಯಿಸರ ಕಡೆ ಜನಗಳು ಬಂದು ಎತ್ಕೊಂಡು ಬರ್ತಾ ಇದ್ರು ಹುಲೀನ!

ನಮ್ಮ ಪಕ್ಕದಲ್ಲಿದ್ದ ಮುದುಕರು ಗೊಣಗುತ್ತಲೇ ಇದ್ದರು. “ನಿಮ್ಮ ಜೋಯಿಸರು ಮಹಾನುಭಾವರು ಕಣಯ್ಯ!”—ಎಂದ ಸೀನಿ. ನೌಜವಾನ್ ಉಳಿದವರನ್ನು ಕಂಡು “ನಗಬೇಡಿ ಸಾರ್, joke ಅಲ್ಲ ನಾನ್ಹೇಳಿದ್ದು; ಫೂರ್ತಿ ಟ್ರೂಥು”—ಅಂದ. “ಛೆ, ಅಲ್ಲದೆ ಉಂಟೆ!”—ಎಂದ ನಮ್ಮ ಅಪ್ಪಾಜಿ. “ನಮ್ಮೂರು ಹುಲಿಗಳೇನೋ ಬಲು ಶಹಣೆ—ಆದರೆ ನಮ್ಮಾಂಜನೇಯ ಶೆರಿಬಲ್ಲು—ಶೆರಿಬಲ್ಲು ಸಾರ್”—ಎಂದ ಮತ್ತೊಮ್ಮೆ. ಆಗ ಅಪ್ಪಾಜಿಗೆ ಏನು ತೋಚಿತೋ, ಎಗರಿ ಕೂತುಕೊಂಡು “ಮಲೆಯಾಳ ರಾಜ್ಯದಲ್ಲಿ ಬಕಪಕ್ಷಿಗಳನ್ನು ಹಿಡಿಯೋ ಕ್ರಮವೂ ಅಷ್ಟೇ ಅದ್ಭುತವಾದದ್ದು”—ಎಂದ.

“ಹೇಳಿ ಸಾರ್, ಆ ವಿಚಾರ ಹೇಳಿ”—ಎಂದು ನೌಜವಾನ್ ಕಾಲರ್ ತೀಡಿಕೊಂಡ.

ಅಪ್ಪಾಜಿ ಪ್ರಾರಂಭಿಸಿದ. “Joke ಅಲ್ಲ Lie ಅಲ್ಲ, ನಾನು ಹೇಳ್ತಿರೋದು ಶುದ್ಧ ಟ್ರೂಥು! ನೀವಂದ ಹಾಗೆ. ಮಲೆಯಾಳದ ಜನಗಳು ಬಲೆ ಪಕ್ಕಾ ನೋಡಿ. ಅಲ್ಲಿ ಕೊಕ್ಕರೆಗಳೋ ವಿಪರೀತ. ನೀರಿದ್ದ ಕಡೇಲೆಲ್ಲಾ ಸಾಲಾಗಿ ಕೂತಿರುತ್ತವೆ. ಅವುಗಳನ್ನ ಹಿಡಿಯೋದಕ್ಕೆ ಮಲೆಯಾಳಿ ಜನರು ಉಪಯೋಗಿಸೋದು ಕೋವೀನೆ?

ಅಥವಾ ಕೋಲು, ಕತ್ತಿ, ಈಟಿ, ಬಲೆ ಇತ್ಯಾದಿಗಳನ್ನೆ? ಊಹು. ಅದೊಂದೂ ಅಲ್ಲಾ. ಬೆಣ್ಣೇನೆ ಅವರ ಆಯುಧ!

"ಏನ್ಸಾರ್ ಬಟರೇ ಅವರ ವೆಪನ್ನು?"

"ರೈಟೋ, ಬಟರು ಕಣಯ್ಯಾ ಬಟರು! ಮಂಡ್ಯದ್ದೇ ಆಗಬೇಕಾಗಿಲ್ಲ. ಇನ್ನು ಕೌ ದಾದರೂ ಸರಿಯೆ; ಬಫೆಲೋ ದಾದರೂ ಸರಿಯೆ!" "ಸರಿ ಮುಂದಕ್ಹೇಳಿ ಸಾರ್; ಬಲೆ ಇಂಟರೆಸ್ಟಿಂಗು."

"ನಾನ್ಹೇಳ್ತಾ ಇದ್ದ ಹಾಗೆ ಬೆಣ್ಣೆಯಿಂದ ಬಕಗಳನ್ನ ಹಿಡೀತಾರೆ ಆ ಕಡೆ ಜನ. ಹ್ಯಾಗೆ ಗೊತ್ತೆ? ಒಂದಿಷ್ಟು ಬೆಣ್ಣೇನ—ಅಲ್ಲಾ—ಬಟರ್‌ನ ಒಂದು ವಾಟರ್ ತುಂಬಿದ ಪಾತ್ರೇಲಿಟ್ಟುಕೊಂಡು— ಅಂದ ಹಾಗೆ ಪಾತ್ರೆಗೇನಂತಾರಯ್ಯ?"

"ಪಾಟ್ ಅನ್ನಿ, ಥೂ ಬೇಡ, ಪಾತ್ರೆ ಅಂತಲೇ ಹೇಳಿ."

"ಆಗ್ಲಿ; ಪಾತ್ರೇಲಿ ಬಟರ್‌ನ ಇಟ್ಟುಕೊಂಡು ಕೊಕ್ರೆಗಳಿರೋ ಕೆರೆ ಅಥವಾ ನದಿ ಕಡೆಗೆ ಹೋಗೋದು. ನೀರಂಚಿನಲ್ಲಿ ನಿಂತುಕೊಂಡು ತಪಸ್ಸು ಮಾಡ್ತಾ ಇರುತ್ತಲ್ಲ ಬಕ! ಒಂದಿಷ್ಟೂ ಸದ್ದಾಗದ ಹಾಗೆ, ಬಲು ಜೋಪಾನವಾಗಿ ಹಿಂದಿನಿಂದ ಬಂದು ಕೊಕ್ರೇನ ಸಮೀಪಿಸಬೇಕು. ಸದ್ದಾದರೆ ಕೊಕ್ರೆ ಹಾರಿಬಿಡುತ್ತೆ. ಆದ್ದರಿಂದ ರಬ್ಬರ್ ಷೂಸ್ ಹಾಕಿಕೊಂಡು ಹೋದರೆ ವಾಸಿ..."

"Eyeನ shut ಮಾಡಿಕೊಂಡು ಹೋದರೆ ಹೇಗೆ?"—ಎಂದು ಕೇಳಿದೆ ನಾನು.

"ಷ್... ಸುಮ್ಮನಿರಯ್ಯ ನಾನೇನೂ ಜೋಕೇ ಹೇಳ್ತಿರೋದು ನಡೆದಿರೋದನ್ನ, ನಡೀತಿರೋದನ್ನ... ಅಂದ ಹಾಗೆ ಕೊಕ್ರೆ ಹತ್ರ ಹೋಗೋದು. ಒಂದಿಷ್ಟು ಬೆಣ್ಣೇನ ತೆಗೆದು 'ತಪಕ್' ಅಂತ ಅದರ ನೆತ್ತಿಮೇಲೆ ಇಟ್ಟುಬಿಡೋದು ತೊಗೊಳ್ಳಿ! ಬೆಣ್ಣೆ ಕರಗೋದಕ್ಕೆ ಪ್ರಾರಂಭ! ನೀರು ನೀರಾಗಿಬಿಟ್ಟು ಕೊಕ್ರೆ ಕಣ್ಣುಗಳ ಮೇಲೆಲ್ಲ ಬರುತ್ತೆ. ಆವಾಗ ಅದಕ್ಕೆ ಕಣ್ಣೆ ಕಾಣೋದಿಲ್ಲ! ಕುರುಡು ಕೊಕ್ರೇನ ಹಿಡಿದು ಚೀಲಕ್ಕೆ ಸೇರಿಸೋದು ಕಷ್ಟವೆ?"

ಕಂಪಾರ್ಟ್‌ಮೆಂಟ್ ಹಾರಿಹೋಗುವ ಹಾಗೆ ನಗು. ಕಡಮೆ ನಕ್ಕಿದ್ದು ನೌಜವಾನ್ ಮಾತ್ರ, ಯಾಕೆಂದರೆ ಎಲ್ಲರೂ ಯಾಕೊ ಅವನನ್ನೇ ನೋಡುತ್ತಾ ಇದ್ದರು.

"ಅಲ್ಲ ಕಣಯ್ಯ, ಮಳೆಗಾಲವಾದರೆ ಬೆಣ್ಣೆ ಬೇಗ ಕರಗುತ್ತ್ಯೆ?"—ಎಂದು ಕೇಳಿದೆ.

"ಆವಾಗ ಮ್ಯಾಚ್‌ಬಾಕ್ಸ್ ತಗೊಂಡ್ಹೋಗ್ತಾರೆ. ಕಡ್ಡಿ ಗೀರಿ ಬೆಣ್ಣೆ ಮೇಲಕ್ಕೆ ಹಿಡಿಯೋದು. ಅಥವಾ ಸಿಗರೇಟ್ನೋ, ಬೀಡೀನೋ ಹೊತ್ತಿಸಿ ಬೆಂಕಿ ತುದೀನ ಬೆಣ್ಣೇಗೆ ಮುಟ್ಸಿದರೆ ಸರಿ! ಅಷ್ಟೂ ತಿಳಿಯೋದಿಲ್ವೆ?"—ಅಂತ ನಕ್ಕ, ಅಪ್ಪಾಜಿ.

ಗಾಡಿಗೆ ಗಾಡಿ ಅಲ್ಲಾಡಿಹೋಯಿತು. ನೌಜವಾನ್ ಮಾತ್ರ ನಗಲಿಲ್ಲ. ಆತ "ಪ್ಲಾಟ್‌ಫಾರಂಗೆ ಹೋಗಿ ಬರ್ತೀನಿ ಸಾರ್"—ಅಂತ ಏಳುಕ್ಕೆ ಶುರು. "ತಾಳಿ, ತಾಳಿ....ನಮ್ಮ ಕಡೆ ಕಳ್ಳರನ್ನ ಹಿಡಿಯೋ ಸಮಾಚಾರ ಹೇಳ್ತೀನಿ"—ಎಂದು ಜಗ್ಗಿ ಕೂರಿಸಿದ ಮಹರಾಯನನ್ನು—ನಮ್ಮ ಸೀನಿ.

ನೌಜವಾನಿನ ಮೂತಿ ಮಾವಿನಕಾಯಷ್ಟಾಗಿತ್ತು.

ಸೀನಿ ಊರಿನಲ್ಲಿ ತಸ್ಕರರು ಬಹಳವಂತೆ. ಆದರೆ ಆ ಊರಿನ ಮಹಾ ಜನಗಳೋ ಬಲು ಜಾಣರು. ಕಳ್ಳ ಬಂದು ಮನೆಗೆ ಕನ್ನ ಹಾಕುವಾಗಲೇ ಕಾದಿದ್ದು ಅವನ ಕೈನ ಕತ್ತರಿಸಿಟ್ಟುಕೊಳ್ಳೋದು. ಕಳ್ಳ ತನ್ನ ಕೈನ ತೆಗೆದುಕೊಂಡು ಹೋಗೋದಕ್ಕೆ ಮಾರನೆ ದಿನ ಬಂದರೆ ಅವನನ್ನ ಪೋಲೀಸಿಗೆ ಕೊಡೋದು ಇಲ್ಲವಾದರೆ ಕೈನೇ ಪೋಲೀಸರಿಗೆ ಕೊಡೋದು. ಅವರು ಕೈ ಚಹರೆಯ ಮೇಲೆ ಸಿ. ಐ. ಡಿ.ಗಳ ಮೂಲಕ....ಇತ್ಯಾದಿ ಇತ್ಯಾದಿ ಹೇಳುತ್ತಿರುವಾಗ ನೌಜವಾನ್ ಎದ್ದೇಬಿಟ್ಟ. "ಬಹಳ ಥರ್ಸ್ಟಿ ಸಾರ್, ಪ್ಲಾಟ್‌ಫಾರಂಗೆ ಹೋಗಿ ಬರುತ್ತೇನೆ"—ಅಂದ.

"ಟ್ರಂಕ್ ಯಾಕೆ ತೊಗೊಂಡು ಹೋಗ್ತೀರಿ. ನೀವು ಹೋಗ್ಬಿಟ್ಟು ಬನ್ನಿ"—ಎಂದು ಉಪಚರಿಸಿದ ಅಪ್ಪಾಜಿ.

"ಪರ್ವಾ ಇಲ್ಲ"—ಎನ್ನುತ್ತಾ ಇಡೀ ಗುಂಪನ್ನ ದುರದುರ ನೋಡಿ, ಇಳಿದೇ ಬಿಟ್ಟ ಮಹರಾಯ. ಮೂಲೇಲಿ ಕೂತಿದ್ದ ಕುರುಡ—ಉದರ ನಿಮಿತ್ತ ಗಾಯಕ—ಹಳಸಲು ಸಿನೀಮಾ ಪದ ಪ್ರಾರಂಭಿಸಿದ "ಚಲ್ ಚಲ್‌ರೆ ನೌಜವಾನ್!"

ರೈಲು ಶಿಳ್ಳೆ ಊದಿತು. ನೌಜವಾನ್ ಬರಲೇ ಇಲ್ಲ.

"ಜಾಗ ಆಯ್ತಲ್ಲ; ರವಷ್ಟು ಜರುಗಿ"—ಎಂದರು ಪಕ್ಕದಲ್ಲಿದ್ದ ಮುದುಕರು.

—ರಾಮಕೃಷ್ಣ.

ಗಂಟೆ ಕೆಟ್ಟೆ....

ಡಯ್ ಢಾಂಯ್—ಡಯ್ ಢಾಂಯ್—ಡಯ್ ಢಾಂಯ್........

"ಅದ್ಯಾಕೇ ಅಕ್ಕ ಗಂಟೆ ಅಷ್ಟು ಜೋೞಲಾಗಿ ಹೊಡೀತದೆ ?"

"ಜನಗಳೆಲ್ಲಾ ಬೇಗನೆ ಬನ್ನಿ ಅಂತ ಕೂಗ್ತಾ ಇದೆ ಕಣೋ ಗಂಟೆ"

"ಅದ್ಯಾಕಕ್ಕಾ ಕೂಗ್ತಾ ಇಲೋದು."

"ಚರ್ಚಿಗೆ ಬೇಗನೆ ಬನ್ನಿ. ಪ್ರಾರ್ಥನೆ ಮಾಡಿ ಅಂತ ಕೂಗ್ತಾ ಇದೆ—ಹೊಡಕೋತಾ ಇದೆ ಗಂಟೆ."

"ಪಾರ್ತ್ನೆ ಮಾಡೋಕೆ ನಮ್ಮನ್ ಕೂಗ್ತಾ ಇದೆ ಅಲ್ವೇನಕ್ಕ ಗಂಟೆ?"

"ಉಂ ಹೌದು ಕಣೋ. ಅಗೋ ಚರ್ಚು ಬಂದು ಬಿಡ್ತು ನೋಡು."

× × × ×

"ಅಕ್ಕಾ...."

"ಮುಚ್ಕೋ ಬಾಯಿ"

"ಗಂಟೆ ಎಲ್ಲಿದೆ ಅಕ್ಕಾ?"

"ಗಂಟೆ ಹೊರಗಡೆ ಇದೆ ಕಣೋ, ಈಗ ಮುಚ್ಚು ಬಾಯಿ."

"ಅದ್ಯಾಕಕ್ಕಾ ಒಲಗೆ ಬರೋದಿಲ್ಲ"

"ಥೂ....ಪ್ರಾರ್ಥನೆ ಆಗ್ತಾ ಇದೆ ಸದ್ದು ಮಾಡಿದರೆ ಅಮ್ಮ ಬೈತಾಳೆ"

"ಗಂಟೆ ಪಾರ್ತ್ನೆ ಮಾಡೋಕೆ ಬರೋಲ್ವೆ ಅಕ್ಕ"

"ಮತ್ತೆ ನೋಡು .."

"ನಮ್ಮನ್ನ ಪಾರ್ತ್ನೆ ಮಾಡೋಕೆ ಬನ್ನಿ ಅಂತ ಕೂಗುತ್ತೆ ತಾನು ಮಾತ್ರ ಬರೋದಿಲ್ಲ ಅದ್ಯಾಕಕ್ಕಾ?"

"ಅಲ್ನೋಡು ಅಮ್ಮ ನೋಡ್ತಾ ಇದಾಳೆ. ಮುಚ್ಚು ಬಾಯಿ."

"ಗಂಟೆ ಕೆಟ್ಟೆ...."

(ಫ್ರಾಂಕ್ಲಿನ್ ಮಾತನ್ನ ಜ್ಞಾಪಿಸಿಕೊಂಡು)

—ಸರೋಜಿನಿ.

ಮಜ್ಜಿಗೆಗೆ ಅನ್ನ ?

———o———

ಎಲ್ಲರೂ ಊಟಕ್ಕೆ ಕೂತಿದ್ದೆವು. ಆ ಮಾತು, ಈ ಮಾತು ಬೆಳೆಯಿತು. ಮುಖ್ಯವಾದ ವಿಷಯ ಎಂದರೆ, ಅನ್ನದಾತನ ವಯಸ್ಸು, ಅವನ ಆಯುಃ ಪ್ರಮಾಣ.

ಏಕೆಂದರೆ, ಆ ಹೊತ್ತಿನ ಊಟಕ್ಕೆ ಅವನ ಷಷ್ಠಿ ಪೂರ್ತಿ ಶಾಂತಿಯೇ, ಪ್ರೇರಕ. ಅವನ ಸಮಕಾಲೀನರಲ್ಲಿ, ಶಾಲಾ ಗೆಳೆಯರಲ್ಲಿ, ಅಧಿಕಾರವಲಯದಲ್ಲಿ, ನಂಟರಲ್ಲಿ, ಇಷ್ಟರಲ್ಲಿ, ಷಷ್ಠಿಪೂರ್ತಿಯಾಗದೆ, ಹೊರಟುಹೋದವರ ಲೆಕ್ಕವೆಲ್ಲ ಬಂತು.

ಆಗ, ಬಲಗಡೆ ಮೂಲೆಯಲ್ಲಿ ಕೂತು, ಲಾಡು ಜಜ್ಜುತ್ತಿದ್ದ ಒಬ್ಬರು, "ನಮ್ಮ ತಿಪ್ಪಾ ಜೋಯಿಸರು ಹೇಳಿದಾರೆ; ರಾಮಣ್ಣ ಇನ್ನೂ ಹತ್ತು ಹದಿನೈದು ವರ್ಷ ಏನೂ ಹೆದರಬೇಕಾಗಿಲ್ಲ, ಅಂತ" ಎಂದರು.

"ಹಾಗಂದರೆ....? ಜೀವ ಇದ್ದರೆ ತಾನೆ ಹೆದರಿಕೆ, ಎಂತಲೋ ?" ಎಂದೊಬ್ಬರು ಕೀಟಲೆ ತೆಗೆದು, ನಕ್ಕರು. ಮತ್ತೊಬ್ಬರು, "ಬದುಕಲಿ, ಪಾಪ! ನಮಗೆ ಭೀಮ ಶಾಂತಿ ಊಟಾನೂ ಸಿಗಲಿ" ಎಂದರು.

ನನ್ನ ಎಡಗಡೆ ಕೂತು ಲಾಡು ಪುಡಿಗೆ ಹಾಲು ಬೆರೆಸುತಿದ್ದ ಒಬ್ಬರು, "ತಿಪ್ಪಾ ಜೋಯಿಸರೆ?... ಯಾವಾಗ ಹಾಗೆ ಅಂದರು ತಿಪ್ಪಾ ಜೋಯಿಸರು, ಹೇಳಿ" ಎಂದು ಬಾಯಿ ಹಾಕಿದರು. "ಹೋದ ನವರಾತ್ರಿ, ವಿಜಯದಶಮಿ ದಿನ" ಎಂಬ ಉತ್ತರ ಬಂತು.

"ಓ! ಹಾಗಾದರೆ, ಅದನ್ನ ನಂಬುವ ಹಾಗಿಲ್ಲ"

"ಏಕೆ ?"

"ತಿಪ್ಪಾಜೋಯಿಸರ ಜಾತಕ ನೋಡಿ ಫಲ ಹೇಳಿದವರೊಬ್ಬರು ಆಗಲೇ ನುಡಿದಿದ್ದಾರೆ, ಅವರ ಮಾತು ಅವರ ಐವತ್ತೆರಡನೆಯ ವರ್ಷದಿಂದಾಚೆ ಬರೀ ಸುಳ್ಳು, ಒಂದೂ ನಡೆಯುವುದಿಲ್ಲ. ಅಂತ....ನವರಾತ್ರಿ ಮೊದಲನೆಯ ದಿನ ಅವರ ಐವತ್ತೆರಡ ನೆಯ ಹುಟ್ಟಿದ ಹಬ್ಬ", ಎಂದು ಹೇಳುತ್ತ, ಅವರು ಚಟ್ಟಿ ನೆಕ್ಕಿದರು.

"ಆತನ ಹೆಸರೇನು? ತಿಪ್ಪಾ ಜೋಯಿಸರ ಜಾತಕ ನೋಡಿ ಫಲ ಹೇಳಿ ದವರದು? ಎಂದು, ರಿಟೈರ್ಡ್ ಸಬ್ ರೆಜಿಸ್ಟ್ರಾರ್ ಭೀಮಣ್ಣನವರು ನೀರು ಕುಡಿ

ಯುತ್ತಾ ಕೇಳಿದರು. "ನಮ್ಮ ಆಫೀಸ್ ಗುಮಾಸ್ತೆ, ಗುಂಡಪ್ಪನ ತಾತ" ಎಂಬ ವಿಚಾರ ಹೊರಬಿತ್ತು.

"ಅವರೇ! ಅವರಿಗೊಂದು ಶಾಪ ಇದೆಯಲ್ಲಾ. ಅವರ ಗುರುಗಳು ಕೊಟ್ಟಿದ್ದು? ಅವರು ಮೈಸೂರು ಪಾಠಶಾಲೆಯಲ್ಲಿ ಜ್ಯೋತಿಷ ಕಲಿಯುತ್ತಿದ್ದಾಗ, ಪಂಚಾಂಗ ಹರಿದನಂತೆ, ಅವಕ್ಕೆ ಅವರ ಗುರುಗಳು ನೀನು ಹಾಕುವ ಕುಂಡಲಿಗಳೆಲ್ಲ ತಲೆಕೆಳಗಾಗಲಿ, ಅಂತ ಶಪಿಸಿದರಂತಲ್ಲಾ....ತಿಪ್ಪಾಜೋಯಿಸರ ಕುಂಡಲಿ... ಅವರು....ಹ.... ಹ್ಹ .ಹ್ಹ ...." ಎಂದು ಸಬ್ ರಿಜಿಸ್ಟ್ರಾರ್‌ರವರು ನಕ್ಕು, ಖೀರಿಗಾಗಿ ದೊನ್ನೆ ತೋರಿಸಿದರು.

"ಹೌದು, ಹೌದು, ನನಗೆ ಗೊತ್ತು, ಆ ಸಮಾಚಾರ! ಆ ಗುರುಗಳನ್ನು ನಾನು ಬಲ್ಲೆ! ಮಹಾ ಕೋಪಿಷ್ಠರು! ಹೊಟ್ಟೆ ವಿಪರೀತ! ಹುಣಿಸೆಕಾಯಿ ತೊಕ್ಕು ಅಂದ್ರೆ ಬಲು ಇಷ್ಟ! ತೆಲುಗರವರು! ನಾನು ಕೇಳಿದ್ದೆ, ಅವರನ್ನ .. ಯಾಕ್ರಿ ಹೀಗೆ ಘಳಿಗೆ ಘಳಿಗೆಗೂ ಶಾಪ ಹಾಕುತ್ತೀರಿ ನಿಮ್ಮ ಶಿಷ್ಯರ ಮೇಲೆ, ಅಂತ....ಆಗ ಅವರಂದಿದ್ದರು ....ನನ್ನ ಶಾಪ ಶಾಪ ಅಲ್ಲ, ಅನುಗ್ರಹ....ನಾನು ಹೇಳಿದ್ದಕ್ಕೆಲ್ಲ ಫಲ ವಿಪರೀತವಾಗಿಯೇ ಲಭಿಸುತ್ತದೆ....ಅದು ನನ್ನ ತಂದೆ ನನಗೆ ಮಾಡಿರುವ ಅನುಗ್ರಹ " ಎಂದರು. ಆದ್ದರಿಂದ ಅವರ ಶಾಪ ಸಿಕ್ಕರ ಮಹಾಪುಣ್ಯ ತಿಪ್ಪಾ ಜೋಯಿಸರ ಕುಂಡಲಿ ನೋಡಿ ಫಲ ಹೇಳಿದವರು ಸರಿಯಾಗಿಯೇ ಮಾಡಿರುತ್ತಾರೆ. ತಲೆಕೆಳಗು ಎಂದಿಗೂ ಆಗಿರುವುದಿಲ್ಲ.. ಎಂದರು, ನನ್ನ ಎದುರಾಗಿದ್ದ ಒಬ್ಬರು ಮುದುಕರು, ರಾಮಣ್ಣನ ಸೋದರ ಮಾವಂದಿರು.

ಅದುವರೆಗೂ ಸುಮ್ಮನೆ ಕುಕ್ಷಿಪೂರಣ ಮಾಡುತ್ತಿದ್ದ ಕೆಂಪು ಶಾಲಿನವರೊಬ್ಬರು, "ಏನಂದೆ! ಏನಂದ, ಅವನು, ಆ ಪಾಠಶಾಲೆ ಪಂಡಿತ! ತಂದೆ ಮಾಡಿದ ಅನುಗ್ರಹವೆ? ತಂದೆಗೂ ಮಗನಿಗೂ ಬದ್ಧದ್ವೇಷ....ಅವನು ಮೊದಲನೆಯವಳ ಮಗ ಆ ತಂದೆ ಅವನಿಗೆ ಅನುಗ್ರಹಮಾಡಿದ ಅಂದರೆ ತೀರಿತು, ಅವನು ಹಾಳಾಗುವುದಕ್ಕೇ ಮಾಡಿರುತ್ತಾನೆ....ಅವನ ಮಾತು ನೆಚ್ಚಿ, ಆ ಪಂಡಿತ ಇವನಿಗೆ ಶಾಪ ಕೊಟ್ಟ, ಇವನು ತಿಪ್ಪಾ ಜೋಯಿಸರ ಕುಂಡಲಿ ಹಾಕಿ,............" ಎಂದು ಮಾತು ಎಳೆದರು; ಹನುಮಂತನ ಬಾಲ. ನನಗೆ ಏಕೋ ಬೇಜಾರಾಯಿತು. ಮಜ್ಜಿಗೆಗೆ ಅನ್ನ ಬೇಡವೆಂದೆ.

ನವ್ಯಕಾವ್ಯಕ್ಕೆ ಅರ್ಥ

—— o ——

ಹಿಂದಿನ ತಿಂಗಳು ಈ ಪತ್ರಿಕೆಯ ಸಂಚಿಕೆಯಲ್ಲಿ ಶ್ರೀಮಾನ್ "ಕಾಮತ್" ಎಂಬ ನಾಮಧೇಯವುಳ್ಳ ಮಹಾ ಕವಿಯೊಬ್ಬರು ಕನ್ನಡಿಗರಿಗೆ ನವ್ಯಕಾವ್ಯ ಬರೆಯುವ ಗುಟ್ಟನ್ನು ಹೇಳಿಕೊಡುತ್ತ ಮಾದರಿಗಾಗಿ ಒಂದು ಸೊಗಸಾದ ನವ್ಯಕವನವನ್ನು ಅವರೇ ಬರೆದು ಕನ್ನಡ ಭಾಷೆಗೆ ಮಹೋಪಕಾರ ಮಾಡಿದ್ದಾರೆ.

ಇಂತಹ ಕವನಗಳನ್ನು ಕವಿ ಇನ್ನು ಮುಂದೆ ಹೆಚ್ಚುಹೆಚ್ಚಾಗಿ ಕಟ್ಟಿ ಪ್ರಕಟಿಸ ಬೇಕೇ ಹೊರತು, ತನ್ನ ಕಾವ್ಯಕ್ಕೆ ಅರ್ಥ ಕಟ್ಟುವವನು ಹುಟ್ಟಿದ್ದಾನೋ ಇಲ್ಲವೋ ಎಂಬ ಅನುಮಾನವನ್ನು ತಾಳಿ ಸಂಕೋಚಪಟ್ಟುಕೊಂಡು ತೆಪ್ಪಗಂತೂ ಕೂರಬಾರದು. ಅರ್ಥ ಕಟ್ಟುವವರಿಗೆ ಏನು ಕಡಿಮೆ? ನಾಳೆ ಏಕೆ ಇಂದೇ ಅವಕ್ಕೆಲ್ಲ ಅರ್ಥ ಕಟ್ಟೋಣ. ನೋಬಲ್ ಬಹುಮಾನವನ್ನು ಕವಿಗೆ ಇಂದೇ ಕೊಡಿಸುವ ಏರ್ಪಾಟು ಮಾಡೋಣ. ಪ್ರಕೃತ ಕವಿಯು ಮಾದರಿಗಾಗಿ ಬರೆದಿದ್ದ ನವ್ಯಕಾವ್ಯಕ್ಕೆ ಅರ್ಥಕಟ್ಟಿ ಕವಿಗೆ ಅದನ್ನು ಹೇಳಬೇಕಾದುದು ಓದುಗನ ಕರ್ತವ್ಯ ಹಾಗೂ ಜವಾಬ್ದಾರಿ! ಈಗ ಕವಿಯು ರಚಿಸಿರುವ ಕವನದ ಪ್ರಥಮ ಎರಡು ಸಾಲುಗಳಲ್ಲಡಗಿರುವ ಅರ್ಥದ ಸೊಗಸನ್ನು ಅರಿಯಲು ಯತ್ನಿಸೋಣ!

"ವಿರಹಿಗಳ ಶೃಂಗಾರ! ಬೆಂಡೋಲೆ, ನಾಯಿತನ ಬೇಡಿನ್ನು,

ಕಾಗೆ ಬಂಗಾರ; ಏಕಂಸತ್! ಪಾನ್‌ಮುನ್‌ಜಾನ್! ಕೇಶವಂ ಪ್ರತಿಗಚ್ಛತಿ"

ಇದಕ್ಕೆ ಅರ್ಥ ಹೀಗೆ ಕಟ್ಟಬಹುದು —

ವಿರಹಿಗಳು ಶೃಂಗಾರ ವಸ್ತುಗಳನ್ನು ಮನನಮಾಡುತ್ತ ಹಗಲುಗನಸು ಕಾಣು ತ್ತಾರಷ್ಟೆ. ಪ್ರಕೃತ ಓರ್ವ ವಿರಹಿ ತನ್ನ ಅಗಲಿದ ಪ್ರಿಯೆಯ ವಜ್ರದ ಬೆಂಡೋಲೆ ಗಳನ್ನು ಚಿತ್ರಿಸಿಕೊಳ್ಳುತ್ತ ಕುಳಿತಿದಾನೆ. ಪ್ರಾಯಶಃ ಆತ ರೈಲ್ವೆ ಸ್ಟೇಷನ್ ಕಲ್ಲು ಬೆಂಚಿನ ಮೇಲೆ ಕೂತು ಈ ಕನಸು ಕಾಣುತ್ತಿರಬೇಕು. ಅವನ ಕನಸಿನ ರೀತಿಯೇ —"ಏಕಂಸತ್!" ಇಂತಹ ದುರವಸ್ಥೆಯು ವಿರಹಿಯನ್ನು ಕಾಡುತ್ತಿರುವಾಗ ಪಕ್ಕ ದಲ್ಲಿಯೇ ಒಬ್ಬ ತರುಸ್ಕರ ಹುಡುಗ "ತಥ್" ಅಂತ ಕ್ಯಾಕರಿಸಿ ಉಗಿದು "ಪಾನ್-ಬೀಡ-ಸಿಗರೇಟ್" ಅಂತ ಕೂಗಿಕೊಳ್ಳುತ್ತಾನೆ. ಬಂಗಾರದ ಬೆಂಡೋಲೆಗಳಿಂದ ಅಲಂಕೃತವಾದ ಒಂದು ಜೊತೆ ಹೆಣ್ಣು ಕಿವಿಗಳಲ್ಲೇ ಪಿಸುಮಾತಾಡುತ್ತಿದ್ದಂತೆ ಹಗಲು

ಚಿತ್ರ ಕಾಣುತ್ತಿದ್ದ ವಿರಹಿಗೆ ತಕ್ಷಣ ಕಾಲ ದೇಶಗಳ ಅರಿವಾಗುತ್ತವೆ. ನೈ ತಿಳಿದು ಎಚ್ಚೆತ್ತೇಳುತ್ತಾನೆ. ಪುನಃ "ಪಾನ್ ಬೀಡ ಸಿಗರೇಟ್" ಎನ್ನುವ ಕೂಗು ಕಿವಿಗೆ ಕೇಳಿಸುತ್ತದೆ. ಆ ಕೂಗಿನಲ್ಲಿ ಪ್ರಥಮತಹ ಕೇಳುವ "ಪಾನ್" ಎನ್ನುವ ಶಬ್ಧ ಇವನ ಸ್ಮೃತಿಪಥಕ್ಕೆ ಬಿದ್ದು "ಪಾನ್ ಮುನ್ ಜಾನ್" ನೆನಪಿಗೆ ಬರುತ್ತದೆ! ಮರುಕ್ಷಣದಲ್ಲಿಯೇ ಅವನ ಕಣ್ಣುಮುಂದೆ, ಯುದ್ಧದ ಭೀಕರ ದೃಶ್ಯಗಳು—ವೀರಾ ಗ್ರಣಿಗಳ ಸಾವು ನೋವು—ಸತಿಪತಿಯರ ಅಗಲಿಕೆಯ ಪರಿತಾಪ—ಬಾಂಬುಗಳ ಸಿಡಿತ—ಯುದ್ಧಬಂದಿಗಳ ಕಷ್ಟನಷ್ಟ—ಮುಂತಾದ ಚಿತ್ರಗಳೆಲ್ಲವೂ ವೇಗ ವೇಗವಾಗಿ ಚಲನ ಚಿತ್ರದಂತೆ ಚಲಿಸುತ್ತ ಹೋಗುತ್ತವೆ. ಆ ಘಳಿಗೆಯಲ್ಲಿ ಆ ವಿರಹಿಗೆ ಮನುಷ್ಯನ ಬಾಳು ಎಷ್ಟು ಕ್ಷಣಿಕ, ಹೊಲಸು ಎನ್ನುವ ಭಾವನೆ ಮೂಡಿ ಅವನು ಬ್ರಂಹ್ಮಾಂಡವನ್ನು ನಿರ್ಮಾಣಮಾಡಿದ ಭಗವಂತನಿಗೆ ಮಣಿಯುತ್ತಾನೆ. ಅವನಲ್ಲಿದ್ದ ಮಿಥ್ಯಾದೃಷ್ಟಿ ಮಾಯವಾಗಿ ಪರಮ ದೈವಭಕ್ತನಾಗುತ್ತಾನೆ. ಮಿರುಮಿರುಗುತ್ತಿದ್ದ ಬಂಗಾರದ ಬೆಂಡೋಲೆಯನ್ನು "ಕಾಗೆ ಬಂಗಾರ"ಕ್ಕೆ ಸಮವಾಗಿ ಕಾಣುತ್ತಾನೆ ಆಗ ಅವನ ಅಂತರಾತ್ಮ ಅವನಿಗೆ ಹೇಳುತ್ತದೆ—"ನಾಯಿತನ ಬೇಡಿನ್ನು" ಅಂತ! ಕೇವಲ ಐಹಿಕ ಸುಖಗಳಿಗೆ ಅವನು ಈವರೆಗೂ ಒಂದು ನಾಯಿಯೋಪಾದಿಯಲ್ಲಿ ಅಲೆಯು ತ್ತಿದ್ದ! ಈಗಲಾದರೋ ಆ ನಾಯಿತನ ಅವನಿಂದ ತೊಲಗಿತು. ಅನಂತರ ಆ ವಿರಹಿಯು ಸ್ಟೇಷನ್ ಪ್ಲಾಟ್‌ಫಾರಂನಿಂದ ಆಚೆಗೆ ಬಂದು ಊರಿನಲ್ಲಿದ್ದ ದೇವಸ್ಥಾನ ಗಳಿಗೆಲ್ಲ ಹೋಗಿ ದೇವರ ಸೇವೆ ಮಾಡುತ್ತಾನೆ. ಮಾಡಿದರೆ ಏನಂತೆ!—"ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ."

ಈ ರೀತಿಯಾಗಿ ಕವಿಯು ಒಂದು ಲೌಕಿಕ ಆಶೆಯನ್ನು ಆಧಾರವಾಗಿಟ್ಟು ಕೊಂಡು ಅಲೌಕಿಕ ಸತ್ಯಕ್ಕೇರುತ್ತಾನೆ. ಮೃತ್ ಶಕ್ತಿಯನ್ನು ಚಿತ್ ಭಕ್ತಿಯನ್ನಾಗಿ ಪರಿವರ್ತನೆ ಮಾಡುತ್ತಾನೆ. ಮೊದಲನೆಯ ಸಾಲಿನಲ್ಲಿ ನಾವು ನೋಡುವುದು ಕಾಮಾಂಧನಾದ ಒಬ್ಬ ವಿರಹಿಯ ಚಿತ್ರವನ್ನು. ಎರಡನೆಯ ಸಾಲಿಗೆ ಬರುವ ಹೊತ್ತಿಗೆ ಅದೇ ವಿರಹಿ ಪರಮ ವೈರಾಗ್ಯವನ್ನು ತಾಳಿ ಪೂಜ್ಯಾರ್ಹವಾದ ಚಿನ್ಮಯ ಮೂರ್ತಿಯಾಗಿರುತ್ತಾನೆ. ಈ ಎರಡು ಘಟ್ಟಗಳ ನಡುವೆ ಆಗಿಹೋಗುವ ಘಟನಾವಳಿ ಗಳನ್ನು ಕವಿ ಕೇವಲ "ಪಾನ್ ಮುನ್ ಜಾನ್" ಎನ್ನುವ ಒಂದೇ ಒಂದು ಪದದಿಂದ ಸೂಚಿಸಿರುವುದನ್ನು ನೋಡಿದರೆ ಕವಿಯ ಚಿತ್ತವೃತ್ತಿ ಊಹೆಗೂ ಸಿಲುಕದು ಎನ್ನುವ ವಿಷಯ ಹೊರಬೀಳುತ್ತದೆ.

ಪ್ರಾಚೀನ ಕವಿಗಳಿಂದಲೂ, ಉಪನಿಷತ್ತಿನಿಂದಲೂ. ಅತ್ಯಾಧುನಿಕ ಕವಿ ಗಳಿಂದಲೂ ಎರವಲು ತೆಗೆದುಕೊಂಡ ಪದಗಳಲ್ಲೇ ಮೇಲಿನ ಎರಡು ಸಾಲುಗಳನ್ನು ರಚಿಸಿ ಈ ಕವಿ ಒಂದು ಸೊಗಸಾದ ದೃಶ್ಯಚಿತ್ರ ಹಾಗೂ ಶಬ್ಧಚಿತ್ರವನ್ನು ನಿರ್ಮಿ ಸಿದ್ದಾನೆ. ಈ ಎರಡು ಸಾಲುಗಳಿಗೇ ಬೇಕಾದರೆ ಇನ್ನೂರು ಪುಟ ಅರ್ಥ ಬರೆಯಬಹುದು

ಸಾಧ್ಯ. ಇದೇ ರೀತಿಯಲ್ಲೇ ಈ ಕವನದ ಮುಂದಿನ ಸಾಲುಗಳಲ್ಲೂ ಸೊಗಸಾದ ಅರ್ಥ ಹುದುಗಿದೆ. ಅದನ್ನೆಲ್ಲ ಬರೆದು ಪ್ರತ್ಯೇಕವಾಗಿ ಬೇಕಾದರೆ 'ಪಾಕೆಟ್ ಬುಕ್'ನಲ್ಲಿ ಪ್ರಕಟಿಸೋಣ !

ಕಡೆಯಲ್ಲಿ ಈ ಕವಿಗೆ ಒಂದು ಮಾತು ಹೇಳಬಯಸುತ್ತೇನೆ. ಅರ್ಥವಾಗುವುದಿಲ್ಲವಲ್ಲ ಅಂತ ಆತ ಏನೂ ಪರಿತಪಿಸಬೇಕಾಗಿಲ್ಲ. ಆತನ ಕೆಲಸ, ಕಟ್ಟುವುದು—ಕವನ ಕಟ್ಟುವುದು. ಅದಕ್ಕೆ ಅರ್ಥ ಕಟ್ಟಿ ಅವರಿಗೆ ತಿಳಿಯಪಡಿಸುವುಕ್ಕೆ ನಾವಿದೇವೆ. ಅವರು ಇದೇ ರೀತಿಯಾಗಿ ಕವನ ಕಟ್ಟುತ್ತ ಹೋಗಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

—ಹಾ. ರಾ.



"ಸೆಲೂನಿಗೆ ಹೋದ ತಕ್ಷಣ ಐದೇನಿಮಿಷ ಸಾರ್, ಅಷ್ಟು ಹೊತ್ತು ಈ ಪುಸ್ತಕಗಳ್ನ ನೋಡ್ತಿರಿ," ಅಂತ ಇಷ್ಟೆತ್ತರದ ರಾಶಿ ತಂದ—ಅದಕ್ಕೆ ವಾಪಸು ಬಂದ್ಬಿಟ್ಟೆ !

'ಮಹಾ' ಎಂದರೇನು ?

ಮಹಾ ವಿದ್ವಾನ್, ಮಹಾ ಸಾಹಸಿ, ಮಹಾ ಕಾವ್ಯ, ಮಹಾ ಮಹಾ, ಎನ್ನುತ್ತಾರೆ! ಮಹಾ ಸಭ್ಯ, ಎಂದರು, ಒಬ್ಬರನ್ನ. ಕ್ಲೀನಾಗಿ ಡ್ರೆಸ್ ಮಾಡುತ್ತಾನೆ; ಪುಷ್ಕಳವಾಗಿ ಬೆಳೆದಿದಾನೆ; ದೇವರು ದಿಂಡರು ಅಂದರೆ, ತುಂಬ ಭಕ್ತಿ— ಎಂದರು ಜನ. ಗುಟ್ಟಾಗಿ ವಿಚಾರಿಸಿದೆ; ಕೂಲಂಕಷವಾಗಿ ವಿಚಾರಿಸಿದೆ. ಬಟ್ಟೆ ಅಂಗಡಿಯವನಿಗೆ ೩ ವರ್ಷಗಳಿಂದ ೨೦೦ ರೂ. ಬಾಕಿ; ಲಾಯರ್ ನೋಟೀಸಿಗೂ ಹೆದರಲಿಲ್ಲವಂತೆ. ಟೈಲರ್‌ಗಳ ಬಿಲ್ಲು, ವಾಷಿಂಗ್ ಬಿಲ್ಲು, ಒಂದನ್ನೂ ಆರು ತಿಂಗಳಿಂದ ಕೊಟ್ಟಿಲ್ಲವಂತೆ. ದಿನ ಬಿಟ್ಟು ದಿನ, ಸೆಲೂನ್‌ನಲ್ಲಿ ಕ್ಷೌರ; ಅವನಿಗೂ ಒಂದೂವರೆ ಬಾಕಿ. ದೇವಸ್ಥಾನಕ್ಕೆ ಶುಕ್ರವಾರ ಶುಕ್ರವಾರ ಹೋಗುವುದು ಯಾರೋ ಒಬ್ಬರ ಭೇಟಿಗಾಗಿ ಅಂತೆ; ದುಡಿದು ತಿಂದು ಅಭ್ಯಾಸವೇ ಇಲ್ಲವಂತೆ; ನಾಗಪುರದಲ್ಲಿ ೧೯೫೦ ರಲ್ಲಿ ಒಂದು ಘಟನೆ ನಡೆದು, ಅಲ್ಲಿಂದ ಇಲ್ಲಿಗೆ ತಲೆ ತಪ್ಪಿಸಿಕೊಂಡು....ಹೆಂಡತಿ ಮಕ್ಕಳನ್ನು ಮಾವನ ಮನೆಯಲ್ಲಿ ಬಿಟ್ಟು........


ಮಹಾ ಜಿಪುಣ! ಬಸ್ಸಿಗೆ ಒಂದೂವರೆ ಆಣೆ ಕೊಡಲು ಮನಬಾರದೆ, ಉದ್ದಕ್ಕೂ ನಡೆದೇ ಹೋಗುತ್ತಾನೆ, ಎಂದರು ಜನ. ಗುಟ್ಟಾಗಿ ವಿಚಾರಿಸಿದೆ, ಕೂಲಂಕಷವಾಗಿ ವಿಚಾರಿಸಿದೆ. ಆರು ತಿಂಗಳ ಹಿಂದೆ ಅವರು ಸದಾ ಬಸ್‌ನಲ್ಲೇ ಓಡಾಡುತ್ತಿದ್ದರಂತೆ ರಿಟೈರ್ಡ್ ಆಫೀಸರ್, ಆತ; ತುಂಬು ಬಾಳು; ಧಾರಾಳಿ; ಹಿಂದೆ ಗೆಳೆಯರಿಗೂ ಬಸ್ ಚಾರ್ಜು ಕೊಡುತ್ತಿದ್ದರು. ಕಾರು ಮಾರಿ ಬಸ್ ಹತ್ತಿದರು. ಅದರೆ ಖಡಾಖಂಡಿತವಾದಿ, ಆದ್ದರಿಂದ, ಕಂಡಕ್ಟರ್ ಒಬ್ಬ ಯಾವನೋ ಒಬ್ಬ ಬಡಪಾಯಿ ಮೇಲೆ ರೇಗಿದಾಗ, ಜಗಳ ಹೂಡಿದರಂತೆ. ರಿಪೋರ್ಟು ಮಾಡಿದರಂತೆ. ಆತನಿಗೆ ಸಸ್ಪೆಂಡಾಯಿತಂತೆ. ಆದ್ದರಿಂದ, ಅವನ ಸಹತಾಪಿಗಳಾದ ಇತರ ಎಲ್ಲ ಕಂಡಕ್ಟರುಗಳೂ ಅವರನ್ನು ಬಹಿಷ್ಕರಿಸಿ, ಅವರಿಗೆ "ಸೀಟಿಲ್ಲ, ಸೀಟಿಲ್ಲ" ಎಂದು ಕೈ ಆಡಿಸಲು ಪ್ರಾರಂಭಿಸಿದರಂತೆ. ಗತ್ಯಂತರವಿಲ್ಲದೆ, ಕಾಲುಗಳನ್ನೂ ಎಳೆದುಕೊಂಡು, ಅವರು ....ಆರೋಗ್ಯವಾಗಿದಾರಂತೆ.

ಮಹಾ ಬುದ್ಧಿವಂತ!....ಫಸ್ಟ್ ಕ್ಲಾಸು....ಮೆಡಲು....ಮೆದುಳು!....ಗುಟ್ಟಾಗಿ ವಿಚಾರಿಸಿದೆ....ದಡ್ಡ ಶಿಖಾಮಣಿ, ನವನೀತ ಶಾಸ್ತ್ರ ನಿಪುಣ, ಕ್ಯಾನಡಾ ಎಂಬುದು

ಉತ್ತರ ಕರ್ನಾಟಕದ ಒಂದು ತಾಲ್ಲೋಕಂತೆ, ಚಿರಾಪುಂಜಿ ಎಂಬುದು ರಾಜಪುತ್ರ ಸ್ಥಾನದ ಒಬ್ಬ ಐತಿಹಾಸಿಕ ರಾಜನಂತೆ! ಹೇಗೋ, ಆ ವರ್ಷ ಬಂದ ಪ್ರಶ್ನೆಗಳ ಪೈಕಿ, ಅವನಿಗೆ ತಿಳಿದಿದ್ದದ್ದೇ ಆರಕ್ಕೆ ಉತ್ತರ....ಆರೇ ಬೇಕಿತ್ತು....ಉಳಿದವರು ಅವನಿಗಿಂತ ದಡ್ಡರು....ಇತ್ಯಾದಿ....

ಮಹೋತ್ಸವ! ಕಿಕ್ಕಿರಿದ ಜನ! ವೈಭವಯುತ ಮೆರವಣಿಗೆ! ಭಿನ್ನವತ್ತಳೆ! ಸಂಗೀತ! ಭಾಷಣ....ಗುಟ್ಟಾಗಿ ವಿಚಾರಿಸಿದೆ. ಬಾತ್ಮೀದಾರರು ಸ್ಥಳ ಪರೀಕ್ಷೆ ಮಾಡಲೇ ಇಲ್ಲವಂತೆ. ಊರಲ್ಲಿ ಪಾರ್ಟಿ; ಮುಖ್ಯ ಅತಿಥಿಗಳಿಗೆ ಪತ್ರಹೋಯಿತಂತೆ, ಬಂದರೆ ತಲೆ ಒಡಿಯುತ್ತೇವೆ; ಅಂತ. ಹತ್ತಾರು ಜನರ ಭಾಷಣ ಸಂಗೀತ ಎಲ್ಲ ಒಟ್ಟಿಗೆ ನಡೆಯಿತಂತೆ, ಬೀದಿಯಲ್ಲಿ, ಕಾರ್ಯದರ್ಶಿಯ ಸುತ್ತ ಜಗಳ ನಡೆದಾಗ.... ಉತ್ಸವದಿಂದಾಗಿ, ಕೋರ್ಟಿಗೆ ಆರು ದಾವಾಗಳು ದಾಖಲಾಗಿವೆಯಂತೆ.

—ಕೇಶವ.



"ನೀವು ಎಷ್ಟೋ ವಾಸಿ, ಸಾರ್! ಹಿಂದಿದ್ದ ಪ್ರೂಫ್ ರೀಡರ್ ವಿಪರೀತ ಕರೆಕ್ಷನ್ ಹಾಕುತ್ತಿದ್ದರು!"

ಪತ್ರಿಕೋದ್ಯಮಿಯ ಪತ್ರ

— ೧ —

ಯಳಂದೂರು.
ತಾ॥ ೧೧-೧-....

ಕ್ಷೇಮ,

ಬಾಲಕ ಯಜ್ಞಪಶುವಿಗೆ ನಿನ್ನ ತಂದೆಯ ಆಶೀರ್ವಾದಗಳು. ಮಗುವೆ, ಮೊನ್ನೆ ಪತ್ರಿಕೆಯೊಂದರಲ್ಲಿ ನಿನ್ನ ಲೇಖನ ನೋಡಿದೆ. ಗಾಬರಿಯಾಯಿತು. ಶಹರಿಗೆ ಹೋಗಿ ಒಳ್ಳೇ ಉದ್ಯೋಗ ಸಂಪಾದಿಸ್ತೀವ್ರುದಾಗಿ ಹೇಳಿ ಲೇಖನ ಬರೆಯುವ ಕೆಲಸಕ್ಕೆ ಇಳಿದದ್ದು ನೋಡಿ ನನಗೆ ಯೋಚನೆಯಾಗಿದೆ. ಏನಾದರೂ ಮಾಡಿಕೊ ನಿನ್ನ ಕರ್ಮ ನನಗೇನು ಎಂದು ಇದ್ದುಬಿಡುತ್ತಿದ್ದೆ; ಆದರೆ ಮೊನ್ನೆ ನಿನಗೋಂತ ಬಂದ ತೂಬುಗೆರೆ ಹೆಣ್ಣು ಪಕ್ಕದ ಮನೆ ಪುಟ್ಟಶಾಮಿ ಪಾಲಾಗುವ ಹಾಗಿದೆ. ನನಗೆ ನಶ್ಯ ಮೂಗಿಗೆ ಸೇರದಂತೆ ಆಗಿದೆ. "ಏನು ಮಾಡುತ್ತಾನೆ ನಿಮ್ಮ ಹುಡುಗಾ" ಅಂದರು. ನಾನು ಲೋಕಾಭಿರಾಮವಾಗಿ "ಹುಟ್ಟಿಸಿದ ದೇವರು ಹುಲ್ಲು ಮೇಯಿಸ್ತಾನೆಯೇ ಯಾವುದೊ ಗುಡೀಲಿ ಜಾಗ ಹುಡುಕಿದ್ದಾನೆ ಹುಡುಗ ಬಲವಾಗಿದ್ದಾನೆ" ಎಂದು ಹೇಳಿದೆ. ಆದರೆ ನಮ್ಮ ಮಗು ಕಮಲಿ ಸುಮ್ಮನಿರದೆ "ಅಣ್ಣಯ್ಯ ಪೇಪರು ಆಫೀಸಲ್ಲಿ ಬರೀತಾರೆ—ಇಗೋ ಅವರ ಹೆಸರು ನೋಡಿ" ಅಂತ ನೀನು ಕಪ್ಪೆಗಳ ಮೇಲೆ ಬರೆದ ಲೇಖನ ಇದ್ದ ಪೇಪರು ತಂದಳು. ಭಾವಿ ಬೀಗರು ಬಣ್ಣ ಬದಲಾಯಿಸಿದರು. ಎಲ್ಲಾ ಬ್ರಹ್ಮ ಬರಹ ದೈವ ಸಂಕಲ್ಪ, ಯಾರ ಕುತ್ತಿಗೆಗೆ ಯಾರ ಮಾಲೆಯೋ ಎನ್ನುವ ಆಧ್ಯಾತ್ಮಿಕವಾದ ತೆಗೆದು ಪುಟ್ಸ್ವಾಮಿ ಮನೆಗೆ ಹೊರಟರು. ಅವರೇ ಅಂದರಂತೆ ಪುಟ್ಸ್ವಾಮಿ ತಂದೆ ಹತ್ತಿರ. "ನಮ್ಮ ಹುಡುಗಿ ಜಾತಕದ ಪುಣ್ಯ ಪೇಪರಾಫೀಸಲ್ಲಿರೋ ಪಾಪರು ತಪ್ಪಿದ್ದು" ಎಂದು ನೋಡಿದೆಯಾ ಅವರ ಕೊಬ್ಬು, ಬಾಲಕನೇ, ಕೇವಲ ಬಾಲವಿದ್ದವನಂತೆ ಆಡಬೇಡ ಕೂಡಲೇ ಆ ಪತ್ರಿಕೆಗೆ ಬರಿಯುವ ಉದ್ಯೋಗ ಬಿಟ್ಟು ಬೇರೆ ಇನ್ಯಾವ ಕಸುಬಾದರೂ ಬೇಗ ಹಿಡಿದು, ತೂಬುಗೆರೆ ಸಂಬಂಧ ಗಟ್ಟಿ ಮಾಡಿಕೊಳ್ಳುವಂತೆ ಮಾಡು. ಇದು ಸುಗ್ರೀವಾಜ್ಞೆ. "ತೂಬುಗೆರೆ ಇಸಮು ಗಟ್ಟಿ ಕುಳ, ಹಗುರಾಗಿ ಬಿಡುವ ವಿಷಯವಲ್ಲ. ಯಾವುದಕ್ಕೂ ಬೇಗ ಬರಿ—ಖಂಡಿತ ಆ ಕೆಲಸ ಬಿಟ್ಟುಬಿಡು.

ಇತಿ ನಿಮ್ಮಪ್ಪ,
ಅಗ್ನಿಹೋತ್ರಿ ಯಜ್ಞವಿಠಲ.

— ೨ —

ಬೆಂಗಳೂರು.

ತಾ|| ೧೯-೧-....

ಕುಶಲ.

ಶ್ರೀ|| ತಂದೆಯವರ ಪಾದಪದ್ಮಂಗಳಿಗೆ ಬಾಲಕ ಯಜ್ಞಪಶುವಿನ ಅನಂತಾನಂತ ಶರಣಾರ್ತಿಗಳು. ನನ್ನ ಪತ್ರಿಕೋದ್ಯೋಗ ತಮಗೆ ತ್ರಿಶೂಲದಂತೆ ಇರಿದದ್ದು ನನಗೆ ನೋವು ಉಂಟುಮಾಡಿದೆ. ನಿಮ್ಮ ಪತ್ರದ ಮುಖ್ಯ ಅಂಶ ಬೇರಾವ ಕೆಲಸಮಾಡಿ ಯಾದರೂ ತೂಬುಗೆರೆ ಹೆಣ್ಣನ್ನು ಒಲಿಸಿಕೋ ಎಂಬುದಾಗಿದೆ. ನಾನು ಆ ತೂಬು ಗೆರೆ ಹೆಣ್ಣಿನ ತಂದೆಗೆ ಇಂದೇ ಒಂದು ಪತ್ರ ಬರೆದಿದ್ದೇನೆ. ಅದರ ಪರಿಣಾಮ ಬಹುವಾಗಿ ಅವರ ಮೇಲೆ ಆಗುವುದೆಂದು ನನಗೆ ಗ್ಯಾರಂಟಿ ಇದೆ. ಆದ್ದರಿಂದ ಅವರಿಗೆ ಬರೆದಿರುವ ವಿಷಯ ಈಗಲೆ ನಿಮಗೆ ಬರೆಯುವುದಿಲ್ಲ.

ನಿಮ್ಮ ನೊಂದ ಮನಸ್ಸಿಗೆ ನೆಮ್ಮದಿ ದೊರಕಿಸದಿದ್ದರೆ ನಾನೆಂಥ ಮಗ— ಮೇಲಾಗಿ ತಾವು ನನ್ನನ್ನು ತರಪೇತು ಮಾಡಿರುವ ರೀತಿ ನನಗೆ ಕಿರೀಟಪ್ರಾಯ. ಎಷ್ಟಾದರೂ ಯಜ್ಞವಿಠಲರ ಮಗ ಎಂದ ಮೇಲೆ ಅದೇ ರಕ್ತಾ ಈ ನನ್ನ ನಾಳಗಳಲ್ಲಿ. ಅವರಿಂದ ಪತ್ರ ಬಂದ ಮೇಲೇ ನಾನು ನಿಮಗೆ ಉತ್ತರ ಬರೆಯುವವ,

ಇತಿ ನಮಸ್ಕಾರ,

ಯಜ್ಞಪಶು.

— ೩ —

ಯಳಂದೂರು.

ತಾ|| ೨೫-೧-....

ಅತಿ ಖುಷಿ.

ಶಹಭಾಷ್ ಮಗನೆ. ಈ ಪ್ರಾಂತಕ್ಕೇ ಕೀರ್ತಿ ತರುವಂಥ ಮಗ ನನಗೆ ಹುಟ್ಟಿದ್ದು ಈ ಪ್ರಾಂತ್ಯಕ್ಕೇ ಆಶ್ಚರ್ಯವಾಗಿದೆ. ತೂಬುಗೆರೆಯವರು ಸಾವಿರ ರೂಪಾಯಿ ವರೋಪಚಾರ, ಎರಡು ಸಾವಿರ ಕ್ಯಾಷು ಕೊಟ್ಟು ಹುಡುಗಿಯನ್ನೂ ನಿನಗೇ ಕೊಟ್ಟು ಲಗ್ನಮಾಡಿ ಕೊಡುವುದಾಗಿ ಬರೆದಿದ್ದಾರೆ. ಆ ಹುಡುಗಿ ಕೂಡಾ ನಿನ್ನನ್ನಲ್ಲದೆ ಬೇರಾರನ್ನೂ ಒಲ್ಲೆನೆಂದು ಚಂಡಿ ಹಿಡಿದಿದೆಯಂತೆ.

ಈ ಕಾಗದಾ ಕಂಡ ಕೂಡಲೆ ನೀನು ತೂಬುಗೆರೆಯ ನಿನ್ನ ಭಾವಿ ಮಾವನವ ರಿಗೆ ಬರೆದ ಪತ್ರದ ಒಂದು ಪ್ರತಿ ನನಗೆ ಕಳಿಸಿಕೊಡು.

ಇತಿ ನಿಮ್ಮಪ್ಪ,

ಅಗ್ನಿಹೋತ್ರಿ ಯಜ್ಞವಿಠಲ.

— ೪ —

ಬೆಂಗಳೂರು.

ತಾ|| ೩೦-೧-....

ಕ್ಷೇಮ.

ನಿಮ್ಮಿಂದ ಈ ರೀತಿಯ ಪತ್ರ ಬಂದೀತೆಂದು ನಾನು ನಿರೀಕ್ಷಿಸಿಯೇ ಇದ್ದೆ. ಹೆಚ್ಚೇನು ಬರೆಯಲಾರೆ. ಇದರೊಂದಿಗೆ ತೂಬುಗೆರೆ ತಮ್ಮಯ್ಯನವರಿಗೆ ಬಂದ ಪತ್ರದ ಪ್ರತಿ ಇಟ್ಟಿದ್ದೇನೆ ಓದಿ. ನಾನು ಈ ಪತ್ರಿಕೋದ್ಯೋಗ ಹಿಡಿದದ್ದು ಉತ್ತಮವೇ ಅಧಮವೇ ತಿಳಿಸಬೇಕೆಂದು ತಿಳಿಮನಸ್ಸಿನಿಂದ ಬೇಡುವ ಎಳೆಯ (ನಿಂಬೆ?)ನ ಅರಿಕೆ.

ಇತಿ,

ಯಜ್ಞಪಶು.

ಇದೋ ಆ ಪತ್ರ.

ಬೆಂಗಳೂರು.

ತಾ|| ೨೨-೧-....

ಕ್ಷೇಮ (?)

ಭಾವಿ ಮಾವಯ್ಯಾ!

ಹಾಗೆಂದು ಸಂಬೋಧಿಸದ್ದಕ್ಕೆ ಈ ಭಾವಿ ಅಳಿಯನ ಬೆನ್ನಿಗೆ ಚೂರಿ ಇರಿಯಬೇಡಿ. ನಿಮಗೆ ಕೋಪ ಬಂದಿದೆ ನಿಜ— ಪಕ್ಕದ ಮನೆ ಪುಟ್ಟ್ಯಾಮಿಯೇ ತಮ್ಮ ಕುವರಿಗೆ ತಕ್ಕ ವರನೆಂದು ನೀವು ನಂಬಿದ್ದರೆ ನನಗೆ ಬರೆಯಿರಿ. ಒಂದು ಒಳ್ಳೇ ನೂಲಿನ ಹಗ್ಗಕ್ಕೆ ಕುಣಿಕೇನೂ ಹಾಕಿ ಕಳಿಸುತ್ತೇನೆ. ನಿಮ್ಮ ಮುದ್ದು ಮಗಳ ಕತ್ತಿಗೆ ಅದು ಉಪಯೋಗವಾಗುತ್ತದೆ. ನಾನು ಪತ್ರಿಕೋದ್ಯೋಗಿ ಎಂದು ತಿಳಿದು ಕೇವಲ ಕಮಂಗಿಯೇ ಆ ಕೆಲಸಕ್ಕೆ ಕೈಹಾಕುವವನೆಂದು ಕೊರಗಿ ನಿಮ್ಮ ಕುವರಿ ನನ್ನ ಕೈ ಹಿಡಿದರೆ ಅವಳು ಎರಡು ಹೊತ್ತು ಅನ್ನ ಕಾಣದೆ ಕೈಲಾಸ ಸೇರಬಹುದೆಂಬ ಕಳವಳ ಅಲ್ಲವೆ? ಹೌದು ಪಾಪ ಹೆತ್ತ ಹೊಟ್ಟೆ ಹಾಗನ್ನಿಸಿರಬಹುದು. ಪುಟ್ಟ್ಯಾಮಿಗೆ ಏನಿವೆ? ಅವನ ಹೆಸರು ಅಚ್ಚಾದರೆ ಅವನ ಲಗ್ನಪತ್ರಿಕೆಯಲ್ಲೇ. ಅವನ ಉಪನಯನ ವಿಧುರಶ್ಪತ್ತದಲ್ಲಿ ಧರ್ಮದ ಮುಂಜಿಯ ಗುಂಪಿನಲ್ಲಿ ಅವನೂ ಗೋವಿಂದ ಅಂದ, ಅಂದ ಮೇಲೆ ಆ ಸಂಭ್ರಮಕ್ಕೂ ಅವನ ಹೆಸರು ಅಚ್ಚಾಗಲಿಲ್ಲ "ಅಚ್ಚಾದರೆ ಏನು ಹೆಚ್ಚೋ ಬಚ್ಚಾ" ಎಂದು ನೀವು ಮೂಗು ಮುರಿಯ ಬೇಡಿ. ದಿನ ಬೆಳಗಾದರೆ ನನ್ನ ನಾಮಧೇಯ ದೇಶದಾದ್ಯಂತ ಅಚ್ಚಾಗಿ ಕನ್ಯಾಪಿತೃಗಳನೇಕರನ್ನು ಕೆರಳಿಸಿ ನನ್ನ ರೂಮಿನ ಮುಂದೆ ಕ್ಯೂ ನಿಂತಿದ್ದಾರೆ. ನಾನು ಅನ್ಯಾಯ—ಒಬ್ಬರಿಗೊಂದು ಇಬ್ಬರಿಗೆ ಎರಡು, ಮೂರು ಜನಕ್ಕೆ ಮೂರು ಬಗೆಯುವವನಲ್ಲ. ನೀವೇ ಮೊದಲು ನಮ್ಮಪ್ಪನ ಮನೆಯ ಮುಂದೆ ಕ್ಯೂ ನಿಂತವರು. ನಿಮ್ಮ ಕನ್ಯೆಯನ್ನು ಪರೀಕ್ಷಿಸಿ

ನಾನು ಇಲ್ಲ ಇದನ್ನು ಒಲ್ಲೆ ಎಂದೆನ್ನುವವರೆಗೆ ಮುಂದಿನವರ ಹೆಣ್ಣು ನೋಡುವಂತಿಲ್ಲ. "ನಾವೇ ಬೇಡಾಂತ ಅನ್ನುವಾಗ ನೀನೇನು ಬಡಬಡಿಸುವುದೋ ಭಡವ" ಎಂದು ನೀವು ಕಣ್ಣು ಕೆಂಪು ಮಾಡಬೇಡಿ. ನಿಮ್ಮ ಹುಡುಗಿಯ ಕೆಂಪಿನ ಮುಂದೆ ನಿಮ್ಮ ಕೆಂಗಣ್ಣು ನನ್ನನೇನೂ ಮಾಡಲಾರದು.

ನಾನು ಪತ್ರಿಕೋದ್ಯೋಗಿ ನಿಜ. ಜನತೆಯ ಜಂಜಾಟದ ಜಿಗುಪ್ಸೆಯ ಜಗಳದ ಜೀವನವನ್ನು ವಿವರಿಸಿ ಬರೆಯುವಾತ. ಜನತೆ! ಎಂತಹ ಶಬ್ದಾಡಂಬರದಲ್ಲಿ ಮರುಳು ಮಾಡುವ ಮೂರ್ಖನಿವ ಎಂದು ಹುಬ್ಬು ಏರಿಸಬೇಡಿ. ಜನತೆ! ನಾನಾ ವಿಧ ಕಸುಬಿನ ದೀನ ದಲಿತರ ಸಮೂಹವೇ ಜನತೆ. ಈ ಜನತೆಯ ಜಟಿಲ ಸಮಸ್ಯೆಯನ್ನು ಜಗತ್ತಿಗೆ ತೋರಿಸಲು ಜಟ್ಟಿಯಂತೆ ನಿಂತಿರುವವನೇ ಈ ಪತ್ರಿಕೋದ್ಯೋಗಿ. ನಾವೆಲ್ಲಾ ಸೇರಿ ಒಂದು ಸಂಘ ಮಾಡಿದ್ದೇವೆ. ಅದಕ್ಕೆ ನಾನು ಕಾರ್ಯದರ್ಶಿಯಲ್ಲ. ಅಧ್ಯಕ್ಷ ಅಲ್ಲ—ಖಜಾಂಚಿಯಾಗಿ ಮೆರೆಯಬೇಕೆಂಬ ಹುಚ್ಚಿಲ್ಲ. ಆದರೆ ಈ ಸಂಘದ ಬೆನ್ನುಮೂಳೆಯ ಎಲುಬಿನ ಸರದಲ್ಲಿ ಮೂರನೆ ಎಲುಬು, ನಾನು.

ಮಾವಯ್ಯಾ ಬೇಸರವಾಯಿತೆ? ಇಲ್ಲ ನಾನು ಬಿಡೊಲ್ಲ ಬೋರು ಮಾಡೇ ಬಿಡುವೆ. ಕ್ಯೂನಲ್ಲಿ ನಿಂತ ಮೊದಲಿಗನಾದ ನಿನ್ನನ್ನು ನಾನು ಬಿಟ್ಟೇನೆ.—ತಾಳ್ಮೆ—ತಾಕತ್ತು—ಥಳಕು—ತಾರಮ್ಮಯ್ಯ ಇವೇ ಪತ್ರಿಕೋದ್ಯಮದ ತಳಹದಿ. ಆದ್ದರಿಂದ ಇವಿಷ್ಟೂ ನನ್ನಲ್ಲಿ ತುಂಬಿ ತುಳುಕುತ್ತಿವೆ. ಬೈಸಿಕೊಳ್ಳಬಲ್ಲ ಬಲ ನನ್ನಲ್ಲುಂಟು ಅದೇ ನಾಳೆ ನಿಮ್ಮ ಹುಡುಗಿ ಒಂದು ಬೈದರೂ ನಾನು ಬಾಯಿಬಿಡೋಲ್ಲ.

ಇನ್ನು ನನ್ನ ಆರ್ಥಿಕ ಬಲದ ಬಗ್ಗೆ ನಿಮ್ಮ ಸಂದೇಹ ನಿವಾರಿಸುವುದು ನಿಮ್ಮ ಮಗಳ ಹಿತದೃಷ್ಟಿಯಿಂದ ನನ್ನ ಕರ್ತವ್ಯ. ಹಿಂದೆ ಹೇಳಿದ ಪತ್ರಿಕೋದ್ಯೋಗಿಗಳ ಸಂಘದ ಸದಸ್ಯರನ್ನು ಯಾರಾದರೊಬ್ಬರು ಸಹಕರಿಸಿ ಪತ್ರಿಕಾ ಸಮ್ಮೇಳನ (ಇದಕ್ಕೆ ಅಂಗ್ರೇಜಿಯಲ್ಲಿ ಪ್ರೆಸ್ ಕಾನ್‌ಫರೆನ್ಸ್ ಅನ್ನುತ್ತಾರೆ) ನಡೆಸುವಂತೆ ಮಾಡುವುದೇ ನನ್ನ ಕೆಲಸ. ಮಂತ್ರಿಗಳು—ಪ್ರಮುಖರು—ಇವರುಗಳಿದ್ದರಂತೂ ಮಾಮೂಲಾಗಿ ನಡೆಯುವ ಸಮ್ಮೇಳನಗಳು ನಡದೇ ನಡೆಯುತ್ತೆ—ಅದರ ಜೊತೆಗೆ ಸೊಗಸಾದ ಉಪಹಾರ ಇದ್ದೇ ಇರುತ್ತೆ ಅಂದ ಮೇಲೆ ತಿಂಡಿಗೇನೂ ಕೊರತೆಯಿಲ್ಲ, ಅಳಿಯನಿಗೆ ಅಂದ ಹಾಗಾಯಿತಲ್ಲವೆ?

ಈಗೀಗ ಇಂತಹ ಸಮ್ಮೇಳನಗಳು ಕಡಿಮೆಯಾಗಿ ನನಗೆ ಕಳವಳಕ್ಕೆ ಈಡಾಗಿತ್ತು. ನನ್ನಂತಹ ಕಿಲಾಡಿ ಇರುವ ತನಕ ನಿಮಗೇಕೆ ಚಿಂತೆ ಎಂದು ಸಹ ಸದಸ್ಯರಿಗೆ ಅಭಯ ನೀಡಿ ಸೈಕಲ್ಲು ಹತ್ತಿ ಹೊರಟೆ. ಜಂಬ ಹೊಡೆದು ಬಂದಾಗ ಬರಿಗೈಯಲ್ಲಿ ಹೋಗುವುದು ಹೇಗೆ? ಎಂದು ಬಾಯಿ ಬಾಯಿ ಬಿಡುತ್ತಾ ಬಜಾರಿನಲ್ಲಿ ಬಾಳೆ ಹಣ್ಣಿನ ಅಂಗಡಿಯೊಂದರ ಮುಂದೆ ನಿಂತಾಗಲೇ ನನ್ನ ಮೆದುಳು ಚುರುಕಿದಂತಾ

ಯಿತು. ಕಾರಣವೇನು ಗೊತ್ತೆ? ಆ ಅಂಗಡಿ ಮುಂದೆಯೇ ಒಬ್ಬ ಬಾಳೆ ಹಣ್ಣಿನ ಸಿಪ್ಪೆ ಮೇಲೆ ಜಾರಿಬಿದ್ದ. ಅಂಗಡಿಯವನಿಗೂ ಆ ಬಿದ್ದ ಬಕರನಿಗೂ ಮಾರಾಮಾರಿಯಾಯಿತು. ತೆಪ್ಪನೆ ನಾನು ಈ ಸುದ್ದಿ ವರದಿ ಮಾಡಿದ್ದರೆ ಮಾಮೂಲಿಯ ಮೂದೇವಿ ವರದಿಗಾರನಾಗುತ್ತಿದ್ದೆ. ನಿಮ್ಮ ಹುಡುಗಿಯು ಕೈ ಹಿಡಿಯುವ ಯೋಗ್ಯತೆ ಆಗ ನನಗೆ ಇರುತ್ತಿರಲಿಲ್ಲ. ಬಾಳೆ ಹಣ್ಣಿನ ಅಂಗಡಿಯವನಿಗೆ ಮೂಗಿಗೆ ತುಪ್ಪ ಸವರಿ "ಎಲೈ ಇದು ನಿನಗೆ ಅವಮಾನ—ನಿಮ್ಮ ಸಂಘದವರಿಂದ ಒಂದು ಪ್ರೆಸ್ ಕಾನ್‌ಫರೆನ್ಸ್ ಕರೆಸು—ನಿಮ್ಮ ಸೇಲ್ಸ್ ಟ್ಯಾಕ್ಸು—ನಿಮ್ಮ ಕಿರುಕುಳು—ನೀವು ಕೊಟ್ಟ ಕೊಳೆತ ಬಾಳೆಯನ್ನೇ ಕೊಂಡೊಯ್ಯದೆ ನಿನಗೆ ಲುಕ್ಸಾನು ಮಾಡುತ್ತಿರುವ ಗಿರಾಕಿ—ನಿನ್ನಂಗಡಿ ಬಾಳೆಯನ್ನೇ ಸವಿದು ಅದರ ಸಿಪ್ಪೆಯನ್ನೆ ಜಾರಿಬಿದ್ದಾಗ ಉಂಡ ಮನೆಗೆ ಎರಡು ಬಗೆವ ಜೀವರ್‍ಸಿಗಳ ಕಾಟ—ಇದನ್ನು ವಿವರಿಸಿ ಸಂಘಟಿತರಾಗಿ ಬಾಳೆಹಣ್ಣು ಮಾರುವವರ ಸಂಘದವರಿಂದ–ಪತ್ರಿಕೋದ್ಯೋಗಿಗಳ ಸಂಘಕ್ಕೆ—ವಿವಿಧ ಬಾಳೆಯ ರಸಾಯನ ಸೇವೆ ನಡೆಸಿ ಸಂಘದ ಸದಸ್ಯರಿಗೆ ಒಂದೊಂದು ಗೊನೆ ಕೊಡಿ"—ಎಂದು ಬಲೆ ಬೀಸಿದಾಗ' ಹಾಗೆಯೇ ಆ ಬಾಳೆಹಣ್ಣು ಮಾರುವವರ ಸಂಘದವರು ನಮ್ಮನ್ನು ಕರೆಸಿದರು. ಆ ದಿನ ತಿಂದ ನಂಜನಗೂಡು—ರಾಜ—ಯಾಲಕ್ಕಿ—ಸೇಲಂಮ್ಮಿನ ಸೊಗಸಾದ ಸಮ್ಮಿಶ್ರಣದ ರಸಾಯನ ನೀವು ನಿಮ್ಮಪ್ಪ— ನಾನು ನನ್ನ ಮುಂಬರುವ ಮಗ ತಿನ್ನಲಿಕ್ಕಿಲ್ಲ ಎಂದು ಹೇಳಬಲ್ಲೆ. ನಿಮ್ಮ ಮಗಳ ಸಲುವಾಗಿ ಕೊಂಚ ರಸಾಯನ ಜಾಡಿಯಲ್ಲಿ ಹಾಕಿ ತೆಗೆದಿರಿಸಿದ್ದೇನೆ.

ಇನ್ನು ಮುಂದಿನ ವಿಷಯ ಹೆಚ್ಚು ಬೆಳಸಲು ಇಷ್ಟವಿಲ್ಲ ಆದರೂ ಹೇಳುವ ವಿಷಯ ಹೇಳಲೇಬೇಕಲ್ಲವೆ? ಸಂಕ್ಷೇಪಿಸುತ್ತೇನೆ ಕೇಳಿ.

ಹಾಲು ಮಾರುವವರ ಸಂಘದವರಿಂದ ಒಂದು ಪತ್ರಿಕಾ ಸಮ್ಮೇಳನ ಕರೆಸುತ್ತೇನೆ. ಬೆಂಗಳೂರಿನ ಜನಸಂಖ್ಯೆ ಏನು?- ಇರುವ ಹಸು ಎಮ್ಮೆಗಳೆಷ್ಟು? ಅವು ಕೊಡುವ ಹಾಲನ್ನು ಬೆಂಗಳೂರಿಗೆಲ್ಲಾ ಹಂಚಬೇಕಾದರೆ ನೀರು ಬೆರಸದಿದ್ದರೆ ಹೇಗೆ ಸಾಧ್ಯ? ಹಾಲು ಸರಬರಾಜಿನ ಸಮಸ್ಯೆಯಲ್ಲಿ ಮೂಲ ಕಚ್ಚಾಮಾಲಾದ ಹಸು ಎಮ್ಮೆಗಳಲ್ಲಿ ಲೋಪವಿದ್ದರೂ ನಾಗರೀಕರಿಗೆ ನಾಜೂಕಾಗಿ ನವಿರಾಗಿ ನೀರು ಬೆರಸಿ ಸೇವೆ ಸಲ್ಲಿಸುತ್ತಿರುವ ಅವರಿಗೆ ಕೇಸು—ಜುಲ್ಮಾನೆಗಳ ಬೆದರಿಕೆ ಇರಬಾರದು. ಇದಕ್ಕೆ ಅವರ ಸಂಘ ಬಲ ನಮ್ಮ ಪತ್ರಿಕಾ ಸಂಘದವರನ್ನು ಕರೆಸಿ—ಹಾಲು ಖೀರು—ಹಾಲು ಖೋವ—ಬಾದಾಮಿ ಹಲ್ವ ಕೊಟ್ಟು ಸಮ್ಮೇಳನ ನಡೆಸಲು ಹವಣಿಸಿದ್ದೇನೆ.

ಮಾವಯ್ಯಾ! ಬೇಸರ ಬಂತೇನು—ಹಾಗಿದ್ದರೆ ಇಲ್ಲಿಂದ ಮುಂದೆ ಕೊಂಚವೇ ಇದೆ ಓದಿಬಿಡಿ. ನಿಮ್ಮ ಇಷ್ಟವಿದ್ದರೆ ಈ ಕಾಗದವನ್ನು ನಿಮ್ಮ ಮಗಳಿಗೆ ಓದಲು ಕೊಡಿ ಹಾಗೆಯೇ ನಯನ ಕ್ಷತ್ರಿಯರು—ನೇಯ್ಗೆಯವರು—ಕ್ಲಾರ್ಕುಗಳು—ಲಾಯರು—ಹೋಟಲಿನವರು, ಬೀಡಿ ಕಟ್ಟುವವರ ಸಂಘ—ಸಿಗರೇಟು ಸೇದುವವರ

ಸಂಘ, ಬೆಂಕಿಪೊಟ್ಲ ಮಾಡುವವರ ಸಂಘಗಳಿಂದ ಪತ್ರಿಕಾ ಸಮ್ಮೇಳನ ಕರೆಸುತ್ತೇನೆ. ಹಾಗೇ ಮುಂದುವರೆದು ಹೊಯಿಸಳ ಕರ್ಣಾಟಕ ಸಂಘ—ಮಾಧ್ವಾ ಸಂಘ—ಕರ್ವೆ ಸಂಘ—ಕರ್ಣಾಟಕ ಸಂಘ—ಸ್ಮಾರ್ತರ ಸಂಘ—ಬಬ್ಬೂರು ಕಮ್ಮೆಳಗ ಸಂಘ—ಶೈವ ಸಂಘ—ಕುರುಬರ ಸಂಘ—ಲಂಬಾಣಿ ಸಂಘ, ಒಂದೆ ಎರಡೆ ಸಾವಿರಾರು ಸಂಘಗಳಿರುವಾಗ ಒಬ್ಬೊಬ್ಬರು ಒಂದೊಂದು ದಿನ ಸಮ್ಮೇಳನ ಕರೆಸಿದರೆ ಮುನ್ನೂರ ಅರವತ್ತು ದಿನವೂ ತಿಂಡಿ ತೀರ್ಥಗಳು ನಡೆಯುವುದರಲ್ಲಿ ಸಂದೇಹವೇನು? ಇಂತಹ ಸಂಘಗಳವರು ಸಮ್ಮೇಳನದ ಸಕಲ ಏರ್ಪಾಟಿಗೆ ನನ್ನನ್ನೇ ಆಶ್ರಯಿಸುವರು. ತಿಂಡಿ—ತೀರ್ಥ ಕುರ್ಚಿ ಮೇಜು ಹಾರ ತುರಾಯಿಗೆಂದು ನನಗೇ ಕೈಗೆ ಇಷ್ಟೊಂತ ಹಾಕಿ ಬಿಡುವರು—ಅಂದ ಮೇಲೆ ದುಡ್ಡಿಗೇನು ನನಗೆ ಕೊರತೆ? ಅದರಲ್ಲಿ ಉಳಿದೇ ಉಳಿಯುತ್ತೆ.


ನಿಮ್ಮ ಮಗಳು ನನ್ನ ಮನೆ ತುಂಬಿಸಿಕೊಂಡಾಗ ಅವಳು ಅರ್ಧಾಂಗಿ ಅಂತ ಆದಮೇಲೆ ನಾನು ಬರೆದ ಲೇಖನ ರಾಶಿಯಲ್ಲಿ ಅವಳ ಹೆಸರಿನಲ್ಲೂ ಅರ್ಧ ಬರೆಯುತ್ತೇನೆ. ಅವಳೂ ಪತ್ರಿಕೋದ್ಯೋಗಕ್ಕೆ ಇಳಿದಂತಾಗಲಿಲ್ಲವೆ? ಅವಳ ಹೆಸರೂ ಪುಟ ಪುಟದಲ್ಲಿ ಅಚ್ಚಾದರೆ ಏನೊಂದು ಸೊಗಸು. ಇಬ್ಬರೂ ಲೇಖಕರು ಎಂದು ಆದಮೇಲೆ ಇಬ್ಬರೂ ಪತ್ರಿಕಾ ಸಮ್ಮೇಳನಕ್ಕೆ ಜೊತೆಗೆ ಹೋಗುತ್ತೇವೆ—ಜೊತೆಗೆ ತಿಂಡಿ—ಜೊತೆಗೆ ಸಿನಿಮ (Press Show) ಇಬ್ಬರೂ ಒಟ್ಟಿಗೇ ಓಡಾಡಬಹುದು—ಹೊ! ಎಂತಹ ಸಮ ಜೋಡಿ!!—ಹೊಂಗನಸು—ಬೆಳದಿಂಗಳು ಸುಗಂಧರಾಜ—ಎಲ್ಲವೂ ಇವೆ ನಮ್ಮೂರಲ್ಲಿ.

ಹೆಚ್ಚು ಬರೆಯಲಾರೆ, ನೀವೇ ನಿರ್ಧರಿಸಬೇಡಿ, ಮಗಳಿಗೂ ಅವಳ ಅಭಿಪ್ರಾಯಕ್ಕೆ ಅವಕಾಶ ಕೊಡಿ ಎಂದು ಬೇಡುತ್ತಿರುವ,

ತಮ್ಮ ಭಾವಿ ಅಳಿಮಯ್ಯ,

ಯಜ್ಞ ಪಶು.

—ದಾಶರಥಿ ದೀಕ್ಷಿತ್.



"ಈತ ಅವರ್ನ ಐದ್ರೂಪಾಯಿ ಕೇಳ್ತಿದ್ದ ಸಾರ್!"

ನವ್ಯಕಾವ್ಯ ಬರೆಯಲೇಬೇಕು

ನನಗೇನಾದರೂ ಕನ್ನಡ ನವ್ಯ ಕಾವ್ಯ ಪ್ರಪಿತಾಮಹ ಎಂಬ ಬಿರುದು ಬರಬೇಕಾಗಿದ್ದರೆ ನವ್ಯಕಾವ್ಯ ಪ್ರಚುರವಾಗಲೇಬೇಕು. ಈಲಿಯಟ್ಟನಿಗೆ ನೋಬಲ್ ಪ್ರೈಸ್ ಬರುವ ಮೊದಲೇ; ಗೋಕಾಕರು ಇಂಗ್ಲೆಂಡಿನಿಂದ ಬರುವ ಮೊದಲೇ, ನಾನು ಪದ್ಯ ಬರೆದು ಎಲ್ಲ ಪತ್ರಿಕೆಗಳಿಂದಲೂ ನಕಾರವನ್ನು ಗಳಿಸಿದೇನೆ. ಈಗ ಕಾಲಕ್ಕನುಗುಣವಾಗಿ ಕೊನೆಯ ೮ ಸಾಲು ಸೇರಿಸಿದ್ದೇನೆ. ನಾನು ಏನೂ ತಿಳಿದವನಲ್ಲ. ಕಾವ್ಯವೆಂದರೇನೋ ಆದರೂ Pudding ರುಚಿ eating ಏ! ಬಲ್ಲುದು.

ಭದ್ರಂ ಕರ್ಣೇಭಿ ಶ್ರುಣಯಾಮ ದೇವಾಃ.
ಉದ್ರೆ ಇಲ್ಲಿ ಸುತ್ರಾಂ ಸಿಕ್ಕಲಾರದವ್ವಾ.
ಕಿಟಕಿಯಾಚೆ ಕಂಬ, ಕೆಳಗೆ ನಿಂತವೆರಡು ಕತ್ತೆ,
ಗಂಡು ಹೆಣ್ಣು! ಬುದ್ಧಿ ಇಲ್ಲ. ಶುದ್ಧ ಕತ್ತೆ.
ರೆಡ್ as a rose is ಷಿ
ಬಿಲ್ಲೆಗೆರಡು ರಬ್ಬರ್ ಪೀಪಿ.
ದೊಂಗಲುನ್ನಾರು ಜಾಗ್ರತ.
ಸತ್ಯಮೇವ ಜಯತೇ ನಾನೃತ.
ಡಬ್ಬಲ್ ರೋಸ್ ಬೀಡಿ ಬಹಳ ಘಾಟು.
ಕಬ್ಬನ್ ಪಾರ್ಕ್; ಕನ್ನಡ; ಚಾಮರ್ಾಡಿಘಾಟು.
ಹಂಪೆ ಹಾಳು ಕೊಂಪೆ! ಇಂಪೆ! ತಂಪೇ!! ಸೊಂಪೇ!!!
ನೂರು ಸಾಲ ಜೊತೆಗೆ ನೂರು ಬಡ್ಡಿ ಚಕ್ರ ಸುಸ್ತಿ ಹರಿಃ ಓಂ ಸ್ವಸ್ತಿ.

ಇತ್ತೀಚೆಗೆ ಸೇರಿಸಿದ ಸಾಲುಗಳು :—

ನೋಲ್ಯಾಂಡು ನೆಹರು ನಾಯಕ ಅಲ್ಲವೆಂದ.
ವೇಸ್ಟ್‌ಲ್ಯಾಂಡ್ ಓದಿಲ್ಲವೇ ನಾನು? ಈಲಿಯಟ್
ನ; ಆವಾರಹೂ. ಶ್ರೀಶ್ಚರತೆ ಲಕ್ಷ್ಮಿ, ಅಲ್ಲವೆಂದವ ಈಡಿಯಟ್
ಬರ್ಕ್ಲಿ ಸಿಗರೇಟಿಗೆರಡೇ ಬಿಲ್ಲಿ.
ಹಿರೋಷಿಮಾ; ನಾಗಸಾಕಿ; ಆಟಂಬಾಂಬ್, ಸ್ಟಾಲಿನ್.
ಗರ್ಲ್ಗಿಂಗ್ ಹಾರ್ಮೋನಿಯಂ. ನವ್ಯಕಾವ್ಯ ಸಿಲ್ಲಿ
ಅಲ್ಲ. ಇದೇ ನಮ್ಮ ಧರ್ಮ;
ಕಠಾಮೃತದ ಹಠಶರ್ಮ; ಸುಟ್ಟೀತು ಚರ್ಮ
ಸಿಂಗ್ಮನ್ ರೀ, ಕಾದಿದೆ ಕಾವಲೀ.
ಓ ಹೆನ್ರೀ, ಚೆನ್ನಾಗಿಲ್ಲವೇನ್ರೀ.

—ಅ. ರಾ. ಸೇ.

ಎಂಥ ರೇಡಿಯೊ ?

—o—

ಹೋಟೆಲುಗಳಲ್ಲಿ ರೇಡಿಯೋ ಇರಬೇಕಾದದ್ದು ನ್ಯಾಯ; ಅದರ ಅರಚಾಟದಿಂದ ಪಾರಾಗಲು ಬೇಗ ಬೇಗ, ತಂದದ್ದನ್ನ ತಿಂದು ಮುಗಿಸಿ ಆತ ಕೇಳಿದ್ದನ್ನ ಕೊಟ್ಟು ಬರಬೇಕಾಗುತ್ತದೆಯಾದ್ದರಿಂದ, ಅಲ್ಲಿ ಸಿಗುವ ಪದಾರ್ಥಗಳ ಗುಣ ದೋಷ ವಿಮರ್ಶೆಗೆ ವ್ಯವಧಾನ ತಪ್ಪಿ, ಮಾಲೀಕ ಎಂಥ ಕಸ ಕೊಟ್ಟರೂ ಅನುಭವಿಸುತ್ತೇವೆ. ಇದರಿಂದ ಆತನಿಗೆ ಲಾಭ.

ಹೀಗೆ, ರೇಡಿಯೋ ಗಲಾಟೆಯ ಅಭ್ಯಾಸ ಮಾಡಿಕೊಂಡಿರುವ ಈಗಿನ ತರುಣ ತರುಣಿಯರು ಮದುವೆಗೆ ರೇಡಿಯೋ ಬಾಗಿನ ಇದ್ದೇ ಇರಬೇಕೆಂದು ಹಟ ಹಿಡಿಯುವುದೂ ಸಹಜ. ಸಿನಿಮಾಗಳಲ್ಲಿ, ಎಂಥ ಹೊಲಸು ಚಿತ್ರದಲ್ಲೂ ಎಂಥ ಬಡ ಗುಡಿಸಲಲ್ಲೂ ರೇಡಿಯೋ ಇಲ್ಲದೆ ಇಲ್ಲ. ಅಂದಮೇಲೆ, ಚಲನಚಿತ್ರ ಸಂಸಾರಗಳನ್ನೇ ಆದರ್ಶವಾಗಿ ಸ್ವೀಕರಿಸಿರುವ ನವಭಾರತ ರೇಡಿಯೋಗಾಗಿ ಮಾವಂದಿರನ್ನು ಪೀಡಿಸುವುದರಲ್ಲಿ ಆಶ್ಚರ್ಯವೇನಿದೆ ?

ರೇಡಿಯೋ ತಂದು ಮನೆಯಲ್ಲಿರಿಸಿಕೊಂಡರೆ, ನಮಗೆ ಅನೇಕ ಅನುಕೂಲಗಳುಂಟು. ಮೊದಲನೆಯದಾಗಿ, ಅನೇಕ ದಿನಗಳು ಮನೆಯಲ್ಲಿ ವಿದ್ಯುಚ್ಛಕ್ತಿಯೇ ಇರುವುದಿಲ್ಲ. ಆದ್ದರಿಂದ, ಅದನ್ನು ತಿರುಗಿಸಿ ಸಂಕಟಪಡುವ ತಂಟೆ ತಪ್ಪುತ್ತದೆ. ಮಕ್ಕಳೆಲ್ಲ ಅದನ್ನ ನುಲಿಚಲು ಹವಣಿಸುವುದರಿಂದ, ಅದಕ್ಕೆ ಗೌಸ್ ಹೊಲೆದು ಪೆಟ್ಟಿಗೆಯೊಳಗಿರಿಸಿ ಬೀಗ ಹಾಕಿ ಅವರನ್ನು ಹಿಂಸಿಸುವುದರಿಂದ ನಮಗೆ ಆನಂದ ಉಂಟಾಗುತ್ತದೆ. ಹೆಣ್ಣು ಮಕ್ಕಳಾರೂ ಅದನ್ನ ಮುಟ್ಟಕೂಡದು, ಷಾಕ್ ಹೊಡೆಯುತ್ತದೆ, ವಾಲ್ವ್ ಕೆಟ್ಟುಹೋಗುತ್ತದೆ, ಪವರ್ ಖರ್ಚಾಗುತ್ತದೆ, ಎಂದು ಅವರನ್ನೂ ಗದರಿಸಬಹುದು.

ವಿದ್ಯುಚ್ಛಕ್ತಿಯೂ ಇದ್ದು, ಮಕ್ಕಳೂ ಇಲ್ಲದೆ, ವಾತಾವರಣ ಅನುಕೂಲವಿದ್ದರೆ, ರೇಡಿಯೋ ಕೇಳಬೇಕಾಗಿಲ್ಲ. ಏಕೆಂದರೆ, ಅದು ಆಗಾಗ್ಗೆ ಮೌನ ತಾಳುತ್ತದೆ, ಅದಕ್ಕೆ ಗಂಟಲು ರೋಗ ಬರುತ್ತದೆ, ಗೂರಲು ಬಾಧಿಸುತ್ತದೆ. ಆಗ ಅದರ ಧ್ವನಿ ಕರ್ಕಶವಾಗುತ್ತದೆ.

ಇವೆಲ್ಲ ಸರಿಯಾಗಿದ್ದರೂ, ಕೇಳತಕ್ಕ, ಆನಂದಿಸತಕ್ಕ ಪ್ರೋಗ್ರಾಂ ಯಾವುದೂ ಇರುವುದಿಲ್ಲ. ಸಿನಿಮಾ ತಾರೆಯರು ಕಥಾ ಮಧ್ಯದಲ್ಲಿ ಮೇಳವಾದ್ಯದ ಮುನ್ನೆಲೆ

ಯಲ್ಲಿ, ನಿಸರ್ಗದ ನಡುವೆ ನಲಿದು ಕುಣಿದು ಹಾಡುವಾಗಲೇ ಅಸಹ್ಯವೆನಿಸುವ ಆ ಹಾಡುಗಳನ್ನು, ಜಿರಲೆ ತುಂಬಿದ ಆ ನಿರ್ಜೀವ ಪೆಟ್ಟಿಗೆಯ ಪಕ್ಕಕ್ಕೆ ಕಿವಿಗೊಟ್ಟು, ನಮ್ಮ ಧೂಳು ತುಂಬಿದ ಮನೆಯಲ್ಲಿ, ಕೇಳುವುದಕ್ಕೆ ಯಾರು ತಾನೆ ಬಯಸಿಯಾರು? ಇನ್ನು, ಆ ಭಾಷಣಗಳೋ?....ರಾಮ! ರಾಮ! ಹೆಚ್ಚು ಆಹಾರ ಬೆಳೆಯಿರಿ, ಡಿ. ಡಿ. ಟಿ. ಚೆಲ್ಲಿರಿ, ಸುಸಂಸ್ಕೃತರಾಗಿರಿ, ಸೊಳ್ಳೆ ನೊಣಗಳನ್ನು ಕೊಲ್ಲಿರಿ....ಸಾಲದೆ ಸಂಸಾರ ತಾಪತ್ರಯಂ? ವೃತ್ತಾಂತಗಳೋ....ನಮ್ಮ ವೃತ್ತಾಂತ ಒಂದೂ ಇರುವುದಿಲ್ಲ. ಅವನು ಯಾವನೋ ಖಾಯಿಲೆ ಬಿದ್ದ! ನಾವು ನಿನ್ನೆ ಮಲೇರಿಯಾದಿಂದ ನರಳಿದೆವಲ್ಲ ಅದರ ಸುದ್ದಿ ಜಗತ್ತಿಗೆ ತಿಳಿಸಬೇಡವೆ? ಅದಕ್ಕೆ ಏರ್ಪಾಟೇ ಇಲ್ಲ. ದೃಶ್ಯ ಕಾವ್ಯ ವಾದ ನಾಟಕವನ್ನು ರೇಡಿಯೋ ಮೂಲಕ ಕಿವಿಗೆ ತುರುಕಿದರೆ, ಏನು ಸುಖ, ಇದು ಏನು ಸುಖಾ....?

ನನಗನ್ನಿಸುತ್ತದೆ, ನಮಗೆ ಇಂದು ಬೇಕಾಗಿರುವುದು ಒಂದು ಹೊಸ ಮಾದರಿಯ ರೇಡಿಯೋ! .. ಅದರೊಳಗಡೆ ಇತರೇ ಯಾವ ತರಂಗಗ್ರಹಣ ಶಬ್ದ ವಿಸ್ತರಣ ಉಪಕರಣಗಳೂ ಬೇಕಿಲ್ಲ. ನೋಟಕ್ಕೆ ಅಂದವಾಗಿರಬೇಕು. ನುಲಿಚುವ ಗುಂಡಿ ಗಳಿರಬೇಕು. ಗರ್ ಗುರ್ ಸದ್ದು ಮಾಡಬೇಕು. ಹೋಟಲುಗಳಲ್ಲೂ ಸಾರ್ವ ಜನಿಕ ರೋಡಿಯೋ ಶ್ರವಣ ಸ್ಥಾನಗಳಲ್ಲೂ ಆಗುತ್ತಿರುವಷ್ಟು ಗಗನ ರೋದನ ಅದರಲ್ಲೂ ಆಗಬೇಕು. ಸಾಕು! ಅಷ್ಟಿದ್ದರೆ, ನಮಗೆ ರೇಡಿಯೋದಿಂದಾಗಬೇಕಾದ ಪುರುಷಾರ್ಥವೆಲ್ಲವೂ ಬಂದಂತೆಯೆ.

—ರೇವಣ್ಣ.




" ಈ ಸಂಕ್ರಾಂತಿ ಬಂದ್ರೆ ಹೀಗೇ. ಅಮ್ಮನ್ನ ಪತ್ತೆ ಹಚ್ಚೋದೇ ಕಷ್ಟ "

ಚೋರ ಬೋರ

(ಕುವೆಂಪು ಕಾಳ್ಕೆ ಬೇಡಿ)

ಬೊಬ್ಬುಳಿ ಗಿಡದಡಿಯಲ ಗೊರಕೆಯ ಹೊಡೆಯುತಲಿದ್ದ
ಒಬ್ಬೊಂಟಿಗ ಬೋರ!
ಕಿವಿಗೊಟ್ಟಲುಗಾಡದೆ ಕೇಳಿದ
ನಲ್‌ನಿಶೆ ಯಾಳ್ ಎದ್ದಿಹ ಚೋರ!
ವ್ಯೋಮದ ತಾರಾ, ಭೂಮಿಯ ಹಾ ರಾ
ಪ್ರೇಕ್ಷರರಿನ್ನೊಬ್ಬರ ಕಾಣೆ
ಜಡ, ಚೇತನದಾ ಸಮಾಗಮ
ಜುಮ್ಮೆಂದಿದೆಮೈ; ಶಿವನಾಣೆ
ಸತ್ತಿಹಮೃತ್ತಾಗಿ ಆಳಿತ್ತರ ಬೋರನ ಪೊರಕೆಯಮೀಸೆಯು
ಚೋರನ ಹೊಂಚುಲ ಹೊನಲಿಗೆ ರೋಮಾಂಚನ ವಾಗುತ್ತಿದ್ದುದೈ
ನಾನಿಲ್ಲದೆ ಹೋಗಿದ್ದರೆ? ಹಾನಾನರಿಯೆ!
ನಾನಿಲ್ಲಿರುವೆಂದೆನಗಾದನುಭವವಿದನೆಂದೂ ಮರೆಯೆ!

—ಹಾ. ರಾ.



ಯಾತ್ರಿಕರ ಪತ್ರ

(೧)

ನಾನು ಆದೇ ತಾನೆ S. S. L. C. ಪಾಸ್ ಮಾಡಿದ್ದೇನೆ. ಮನೇಲಿ ಗುಲ್ಲೋ ಗುಲ್ಲು. ನನ್ನಪ್ಪ ಕೆಲಸಕ್ಕೆ ಸೇರೂಂತ ಪೀಡಿಸುತ್ತಿದಾರೆ. ಅಮ್ಮ—ಬೇಡ ಕಾಲೇಜು ಸೇರಿ ಓದಲಿ ಅಂತ. ಅದಕ್ಕೆ ಅಪ್ಪ—ಥೂತ್!—ಈ ಇಂಗ್ಲೀಷು ಎಷ್ಟು ಕಲಿತರೂ ಇನ್ನು ಮೇಲೆ ಉಪಯೋಗವಿಲ್ಲ. ಈಗ ಇಂಗ್ಲೀಷ್‌ನಲ್ಲಿ ಕಲಿತದ್ದೆಲ್ಲಾ ಪುನಃ ನಮ್ಮ ದೇಶದ ಭಾಷೇಲಿ ಕಲಿತು ಇಂಗ್ಲಿಷ್ ಮರೆತರೇನೇ ಅವನಿಗೆ ಗೌರವ—ಅಂತಾರೆ. ಈ ಜಗಳ ಕೇಳಿ ನನಗೆ ಬೇಜಾರಾಗಿ ಬೀದಿಗೆ ಬಂದೆ. ಅಲ್ಲೂ ಗುಲ್ಲೋಗುಲ್ಲು! ಒಂದು ನೂರಾರು ಜನ ಧಿಮಿ ಧಿಮಿ ಅಂತ ಬಾವುಟಗಳನ್ನ ಹಿಡಿಕೊಂಡು ಬರ್‍ತಿದಾರೆ—ನನ್ನ ನೋಡಿದ್ದೇ ತಡ—ಬೀದೀಗೆಳ್ಕೊಂಡ್ರು—"ಹಾಕ್ರೊ—ಈ ಇಂಗ್ಲೀಷ್ ಕಪೀಗೆ?"—"ಹುಯ್ರೋ ಅವನ ಗಂಟ್ಲಿಗೆ ಈ ಅಮರಾನ!"—ಅಂತ ಎಳೆದಾಡಿ—ನನ್ನ ಬನೀನು ನಿಕ್ಕರು ಹರಿದು "ಕೀಳಿರೋ ಇವನ ಕಾಲರ್‍ನ!" ಅಂತ ನೆಲದ ಮೇಲೆ ಉರುಳಾಡಿಸಿದ್ದಾರೆ.

ಅಯ್ಯೋ! ಅಯ್ಯೋ! ಅಂತ ಅರಚಿ ಕಣ್ಣು ಬಿಟ್ಟೆ—ಬೆಸ್ತರಹಳ್ಳಿ ದೇವಸ್ಥಾನದ ಛತ್ರದಲ್ಲಿ. ನನ್ನ ಪಕ್ಕದಲ್ಲಿ ಚಂದಿ ಕೂತಿದ್ದಾನೆ.

"ಏನು ಕುಂಭಕರ್ಣನಯ್ಯಾ ನೀನು? ನಾನೂ ಕಾಲು ಘಂಟೆಯಿಂದ ನಿನ್ನ ಉರುಳಾಡಿಸ್ತಾ ಇದ್ದೇನೆ" ಅಂದ.

ಮೈಯೆಲ್ಲಾ ನೋವು. "ಎಷ್ಟೋ ಗಂಟೆ?" ಅಂದೆ. "ಎರಡು" ಅಂದ.

"ಅಯ್ಯೋ ದೆವ್ವ—ಈಗೇಕೆ ಎಬ್ಬಿಸಿದೆ?" ಅಂದೆ.

"ಏನಿಲ್ಲ ಕಾಣೋ—ಒಂದು ಕವನ ಮಾಡಿದ್ದೇನೆ—ಅದನ್ನ ಕೇಳು" ಅಂತ ಒಂದು ಕಾಗದ ಹಿಡಿದ.

ನಂಗೆ ರೇಗಿತು.

"ಈ ನಿಶರಾತ್ರೀಲಿ ನಿನ್ನ ಕವನ ಹೇಳೋಕೆ ನನ್ನ ಎಬ್ಬಿಸಿದೆಯಾ? ನಿಂಗೆ ಜರೂರು ತಿಗಣೆ ಜನ್ಮ ಬರುತ್ತಯ್ಯಾ" ಅಂತ ಶಪಿಸಿದೆ.

"ಲೋ ಕೋಪ ಮಾಡ್ಬೇಡ. ಇದು ಕೇಳು" ಅಂತ ಗೋಗರೆದ.

"ಬಗುಳು—ಕೇಳಿ ಮಲಗುತ್ತೇನೆ" ಅಂದೆ. ಷುರುಮಾಡಿದ.

"ಉಣಲಿಕ್ಕೆ ತೊಡಲಿಕ್ಕೆ ಸಾಕಷ್ಟು ಇರಬೇಕು
ಪಾನಕ್ಕೆ ತುಸ ಸಮೃದ್ಧಿಯಾಗಿ
ದಾಹವೆಂಬುದಪಾಯ—ಸರ್ವಜ್ಞ"

"ಆದಿರಲಿ—ನಿಂಗೂ ಸರ್ವಜ್ಞನಿಗೂ ಏನು ಶತೃತ್ವ? ಅವನ ಹೆಸರು ಏಕೆ ಕೆಡಿಸ್ತಿ ಪಾಪ?" ಅಂದೆ.

"ಇದು 'ಸರ್ವಜ್ಞ' ಅಂದರೆ ಆ ಸರ್ವಜ್ಞ ಅಲ್ಲಾ ಕಣೋ. ಈ ಕಾಲದಲ್ಲಿ ನಾವೆಲ್ಲಾ ಸರ್ವಜ್ಞರೇ. ಒಂದು English lineನ Translate ಮಾಡಿದೆ ಅಷ್ಟೆ– Enough to eat and enough to wear—a little more than enough to drink 'cause thirst is a dangerous thing!'—ಕೇಳಿಸ್ತೇ ನೀನು?" ಅಂದ.

"ಸರಿ, ಕೇಳಿದೆ. ಹೋಗಿ ಮಲಗು" ಅಂದೆ.

"ಇಲ್ಲ ಕಾಣೋ—ನಂಗನ್ನಿಸ್ತೆ. ನಾವೇಕೆ 'Anti prohibition drive' ಮಾಡ್ಬಾರ್ದು ಅಂತ? ಏನೋ ಹೀಗೇ ಆಗಿ ಈಗಿರೋ ದರ್ಬಾರುಗಳೆಲ್ಲಾ ಕುಸಿದು ಬೀಳೋ ಹೊತ್ಗೆ ನಾವೇ ಜನಮನ್ನಣೆ ಗಳಿಸಿ ನಾಯಕರಾಗೋಗ್ಬಿಟ್ರೆ ಮುಂದೆ...."

"ಲೋ—ಬೆಪ್ಪುಕ್ಡಿ. ಹೋಗಿ ಮಲಗು. ನಾವು ಊರು ಸೇರಿದ ಮೇಲೆ ಬೇಕಾದರೆ ನೀನೂ ಆ ರಾಜ ಹೇಗಾದ್ರೂ ಹಾಳಾಗಿ—ಕಡೆಗೆ ಮಂತ್ರಿಗಳಾಗಿ. ಈಗ ದಯವಿಟ್ಟು ನನ್ನ ನಿದ್ರೇಗೆ ಬಿಡು" ಅಂತ ಬಾಯಿ ಮುಚ್ಚಿದೆ. ಅದಕ್ಕೆ ಚಂದಿ—"ಶುದ್ಧ Chicken hearted fellow ಕಣೋ. Ambitionನ್ನೇ ಇಲ್ಲ" ಅಂತ ಗೊಣಗುಟ್ಟುತ್ತಾ ತನ್ನ ಜಾಗಕ್ಕೆ ಹೋದ.

ಬೆಳಿಗ್ಗೆ ಏಳುವಾಗ್ಗೆ ಒಂಭತ್ತಾಗಿತ್ತು. ಚಂದಿ ಇನ್ನೂ ಮಲಗಿದ್ದ. ಕಾಲು ಘಂಟೆ ಎಳೆದಾಡಿ ಕಡೆಗೆ ಮುಖಕ್ಕೆ ತಣ್ಣೀರೆರಚಿದ ಮೇಲೆ ಎದ್ದ.

"ಲೋ ಚಂದಿ—ಏಳೋ—ನಿನ್ನ ಮಾವನ...."

"ಬರ್ತೀನೋ ಮಹರಾಯ! ನನ್ನ ನೆಂಟಸ್ತನ ನನಗೆ ಪುನಃ ತಿಕ್ಕಬೇಡ" ಅಂತ ಎದ್ದು ನಿಂತ.

ಹತ್ತು ಘಂಟೆಗೆ ಬೆಸ್ತರಹಳ್ಳಿ ಬಿಟ್ಟೆವು. ನನಗಿಷ್ಟವಿಲ್ಲದಿದ್ದರೂ ಚಂದಿ ಮನಸ್ಸು ನೋಯಿಸಬಾರದೆಂದು. ತಮಟಿಕೆರೆ ಕಡೆಗೆ ಹೊರಟೆವು ನಾಲ್ಕು ಮೈಲಿ ತುಳಿಯೋ ಹೊತ್ತಿಗೆ ಸುಸ್ತಾಯಿತು. ಇಬ್ಬರೂ ಒಂದು ಮರದ ಕೆಳಗೆ ಇಳಿದೆವು. ನಮ್ಮಿಂದ ಒಂದು ಫರ್ಲಾಂಗ್ ದೂರದಲ್ಲಿ ಒಂದು ಊರು ಕಾಣಿಸಿತು. ಅಲ್ಲಿ ಕಾಫಿ ಸಿಗಬಹು ದೆಂಬ ಆಸೆಯಿಂದ ಪುನಃ ಹತ್ತಿದೆವು. ಸಾರ್ಥಕವಾಗಿ ನಾವು ಊರು ಹೊಕ್ಕ ಮರುನಿಮಿಷದಲ್ಲೇ ಒಂದು ಹೋಟೆಲಲ್ಲಿ ಕಾಫಿ ತರೋಕೆ ಮಾಣಿಗೆ ಹೇಳಿ ಕುಳಿತೆವು. ಹೋಟೆಲು ಸುಮಾರು ದೊಡ್ಡದು—ಹತ್ತು ಹನ್ನೊಂದು Table ಇರೋದು. ನಮ್ಮ ಪಕ್ಕದ Tableನಲ್ಲಿ ನಾಲ್ಕು ಜನರಿದ್ದು, ಅವರಲ್ಲಿ ಈ ರೀತಿ ಬಿರುಸಾಗಿ ಮಾತು ಗಳಾಗುತ್ತಿದ್ದವು........

"ಬಿಡಯ್ಯ—ಆ ಹುಲಿಗಳಿಗೆ ಎಷ್ಟು ದಿನದಿಂದ ಇದ್ದ ಸೇಡೋ ತೀರಿಸಿಕೊಂಡಿರ ಬೇಕು."

"ಸೇಡಲ್ಲಯ್ಯಾ—ಹಸಿವು !"

"ಹೌದಯ್ಯಾ—ಅಲ್ಲಿದ್ದ ಮೊಲ ಮೊದಲ್ಗೊಂಡು ಆನೇವರಿಗೂ ಹೊಟ್ಟೆಗಿಲ್ಲದೆ ಆಗಿತ್ತು."

"ನಂಗನ್ನಸ್ತೆ ಈ ಪರದೇಶೀ ಊರಿಗೆ ಯಾಕೆ ಬಂದ್ರೋ ಅಂತ?"

"ಮೊದಲು ಚೆನ್ನಾಗಿದ್ರಂತಯ್ಯಾ"—ನಂಗೆ ಕುತೂಹಲವೂ, ಭಯವೂ ಆಗಿ, ಕಡೆಗೆ ಕೇಳಿದೆ.—

"ಏನು—ಷಿಕಾರಿ ಸಮಾಚಾರವೇ?" ಅಂತ.

"ಅಲ್ಲಾ ಸ್ವಾಮಿ, ಸರ್ಕಸ್ಸು" ಅಂತ ಒಬ್ಬಾತ.

"ಯಾವ ಸರ್ಕಸ್ಸು?" ಅಂದೆ.

"ಯಾವುದೋ ಸರ್ಕಸ್ಸು ಇಲ್ಲೊಂದು ಬಂದಿತ್ತು—ಪೋದ ಬ್ಯಾಸಿಗೇಲಿ." ಅಂದ.

ಚಂದಿ ಪೂರ್ತಿ ಸಮಾಚಾರಾನಾದ್ರೂ ಹೇಳಿ" ಅಂದ.

ನನಗೇನೋ ಬಾಯಿಗೆ ಬಂತು. ತಕ್ಷಣ—ಒಂದು ವೇಳೆ ಅಲ್ಲೇ ಹೊತ್ತಾಗಿ ಬಿಟ್ರೆ ಅವನ ಮಾವನ....ತಮಟಿಕೆರೆಗೆ ಹೋಗೋದು ತಪ್ಪುತ್ತೆ ಅಂತ ಸುಮ್ಮನಾದೆ.

ಒಬ್ಬಾತ ಷುರು ಮಾಡಿದ.

"ನೋಡಿ ನನಗೆ ಗೊತ್ತು. ಆ ಸರ್ಕಸ್ ಕಂಪೆನಿ ಸುಮಾರು ತೊಂಭತ್ತು ವರ್ಷದ್ದು. ತಾತ ಷುರು ಮಾಡಿದ್ದು ಮೊಮ್ಮಗ ನಡಿಸಿಕೊಂಡು ಬರುತ್ತಿದ್ದ. ನಾಜೋಕಾಗಿ ನಡೆದು ಬರುತ್ತಿತ್ತು. ಹೆಸರುವಾಸಿಯಾಗಿತ್ತು. ಈಗ್ಗೆ ಏಳೆಂಟು

ವರ್ಷಗಳಲ್ಲಿ ಅಲ್ಲಿದ್ದ ಕೆಲಸಗಾರರಿಗೆ ಸ್ವಾತಂತ್ರ್ಯದ ತಿಗಣೆ ಕಚ್ಚಿತು. ಎಲ್ಲರೂ ಸೇರಿ ತಾವೇ ಆ ಸರ್ಕಸ್ಸು ನಡೆಸುವ ಅಂತ ನಿರ್ಧರಿಸಿದರು. ಮಾಲೀಕರೂ ಒಪ್ಪಿದರು. ಅವರಿಗಿದ್ದ ಅಧಿಕಾರದ ತಲೆನೋವನ್ನು ಸಂತೋಷವಾಗಿ ಬಿಟ್ಟುಕೊಟ್ರು. ಜೊತೆಗೆ ಅವರಿಗೆ ಪಿಂಚನಿ ಸಿಕ್ತು. ಎರಡೊರ್ಷ ಸುಮಾರಾಗಿ ನಡೀತು. ಮೂರನೇ ವರ್ಷ ಗುದ್ದಾಟ ಶುರುವಾಯಿತು. ಪಾರ್ಟಿಗಳಾದವು. ಮೊದಲು ಜಾತಿಗಳ ಪಾರ್ಟಿಗಳಾದವು. ಆ ಮೇಲೆ ಒಳ ಜಾತಿಗಳ ಪಾರ್ಟಿಗಳಾದವು. ಆ ಮೇಲೆ ಭಾಷಾವಾರು ಪಾರ್ಟಿಗಳಾದವು. ನಾಯಕರ ಚುನಾವಣೇಲಿ ಗದಾ ಯುದ್ಧಗಳೇ ಆದವು. ಅಂತೂ ಇಂತೂ ಚುನಾವಣೆಯಾದ ಮೇಲೆ, ಗೆದ್ದ ನಾಯಕರು ಸೇಡು ತೀರಿಸಿಕೊಳ್ಳೋಕೆ ಆಡಳಿತದಲ್ಲಿ ಹನುಮದ್ವಿಲಾಸವನ್ನೇ ಆಡಿದರು. ಪಾಪ—ಲಂಕಾದಹನ ತೋರಿಸೋರು - ಆದರೆ ತಮ್ಮ ಬಾಲಕ್ಕೆ ಬೆಂಕಿ ಹಚ್ಚಿಕೊಳ್ಳೋಕೆ ಒಬ್ಬರಿಗೂ ದಂಮಿಲ್ಲ—-ಅಷ್ಟೆ. ಘನವಾಗಿ ಆಡುತ್ತಿದ್ದ ಉಸ್ತಾದಿಗಳಿಗೆಲ್ಲಾ ತಿದ್ದೋಕೆ ಶುರುಮಾಡಿದರು. ಉಸ್ತಾದಿಗಳಿಗೆಲ್ಲಾ ಅಧಿಕಾರದ ಅಮಲು ಏರಿ ಒಬ್ಬರಿಗೊಬ್ಬರು ಎದುರಾದರು. ಹುಚ್ಚು ಹುಚ್ಚು ಕಾನೂನುಗಳನ್ನು ಮಾಡಿದರು. ಸಂಪ್ರದಾಯವಾಗಿ ಬಂದಿದ್ದ ಆಡಳಿತದ ಬಿಕ್ಕಟ್ಟನ್ನು ಹಾಳುಮಾಡಿದರು. ಕಂಪೆನೀಲಿ ಕೆಲವು ಆಟಗಳು ಬಲು ಚೆನ್ನಾಗಿದ್ವು ನಾ ನೋಡಿದ್ದೇನೆ. ಅದನ್ನ ನೋಡೋಕೇಂತ ಎಷ್ಟೋ ಜನ ಬರ್ತಿದ್ರು. ಅದರಿಂದಲೇ ಆ ಕಂಪೆನೀಗೆ ಲಾಭ ಇತ್ತು. ಅಂಥಾ ಆಟಗಳನ್ನು—ಇದು ವಿದೇಶಿ—ಇದು ಪರದೇಶಿ - ಅಂತ ಒಂದೊಂದು ನೆಪಹೂಡಿ ನಿಲ್ಲಿಸಿದರು. ಇದರ ಪರಿಣಾಮವಾಗಿ ಕೆಲಸಗಾರರ ಸಂಬಳ ಖೋತಾ ಆಯಿತು. ಮುಷ್ಕರ ಹೂಡಿದರು. ಬೇಜವಾಬ್ದಾರಿಯಾಗಿ ಕೆಲಸ ಮಾಡಿದರು. ಸರ್ಕಸ್ ಕಂಪೆನಿ ಹೆಸರೇ ಹಾಳುಮಾಡಿದರು. ದುಡ್ಡಿಲ್ಲ. ಘರದೇ ತೂತಾಯಿತು. ಡೇರಾ ಹರಿಯಿತು. ಬೆಂಚು ಕುರ್ಚಿಗಳು ಕೂತರೆ ಬೀಳುವಂತಾದವು. ಕೂಲಿ ಆಳು ಜಾನುವಾರು ಮೊದಲ್ಗೊಂಡು ಹುಲಿಗಳಿಗೂ ಆಹಾರ ಅಭಾವವಾಯ್ತು. ಆನೆಗಳು ಹಸಿವನ್ನು ತಾಳದೆ ಉಗ್ರಾಣಕ್ಕೆ ನುಗ್ಗಿ ಧಾನ್ಯಗಳನ್ನು ಧ್ವಂಸಮಾಡಿದವು. ಹುಲಿಗಳು ಹಸಿವು ತಡೀಲಾರದೇ ಹೊರಕ್ಕೆ ಕಿತ್ತು ಬಂದು ಆಡುಗಳನ್ನೂ ಕುದುರೆ ಮರಿಗಳನ್ನೂ ತಿಂದವು. ಸಿಂಹಗಳು ಆನೆಗಳ ಮೇಲೆ ಹಾರಿ ಕೊಂದವು. ಅಲ್ಲಿದ್ದ ಕೆಲಸಗಾರರಂತೂ—ತಮಗೆ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಪರಾರಿಯಾದರು. ಅಂತೂ—ಕೊನೆಗೆ ಉಳಿದಿದ್ದು—ಇಪ್ಪತ್ತೈದು ಗೂಟಗಳು, ಕೆಲವು ಮೂಳೆಗಳು—ಇನ್ನೂ ಅಲ್ಲೇ ಬಿದ್ದಿವೆ" ಅಂತ ಮುಗಿಸಿದ.

ಚಂದಿ "ಆ ಮಾಲೀಕನೇನಾದನ್ರೀ?" ಅಂದ.

ಅದಕ್ಕವನು "ಅಯ್ಯೋ ಅವರೇ?—ಅವನಿಗೇನು ಕನಸಾಯಿತೋ ಕಾಣೆ—ಈ ಪತನಕ್ಕೆ ೨ ವಾರ ಮುಂಚೆ ಎಲ್ಲೋ ಪರಾರಿಯಾದ" ಅಂದ.

"ಅನ್ಯಾಯ!" ಅಂದೆ.

"ಸುಮ್ನಿರಿ—ಸ್ವಾಮಿ—ಅವರು ಇವೆಲ್ಲಕ್ಕೂ ಸಿಕ್ಲಿಲ್ಲ– ಪುಣ್ಯಾತ್ಮ" ಅಂದ.

"ನಾ ಹೇಳಿದ್ದು ಅದಕ್ಕಲ್ರೀ—ಎಂಥಾ ಕಂಪೆನಿಗೆ ಎಂಥಾ ಸ್ಥಿತಿ ಬಂತು? ಅಂತ" ಅಂದೆ.


"ಕಂಪ್ನೀಗೇನು ಬುದ್ಧಿ? ಈ ಕಾಲ್ದಲ್ಲಿ ದೇಶಕ್ಕೇ ಆ ಗತಿ ಬರ್ತದೆ" ಅಂದ.

"ಹೌದಯ್ಯಾ—ಸರ್ಕಸ್ಸು– ಸರ್ಕಾರ ಅಷ್ಟೇನು ವ್ಯತ್ಯಾಸವಿಲ್ಲ" ಅಂದ. ಸಾಹಿತಿಗಾರ ಚಂದಿ.

ನಾವು ತಮಟಿಕೆರೆ ಸೇರುವಾಗ್ಯೆ ಮಧ್ಯಾಹ್ನ ಮೂರು ಘಂಟೆ. ಇಬ್ಬರಿಗೂ ವಿಪರೀತ ಸುಸ್ತು. ಚಂದೀ ನೆಂಟರ ಮನೆ ಹುಡುಕಿಕೊಂಡು ಪತ್ತೆಹಚ್ಚಿದೆವು. ಬಾಗಿಲು ಬಡಿದಿತ್ತು. ವಿಚಾರಿಸಿದ್ದರಲ್ಲಿ ಅವರೆಲ್ಲಾ ಅವರ ಬೀಗರ ಕಡೆ ದಾಯಾದಿಗಳ ಪೈಕಿ ಒಬ್ಬರ ಮದುವೆ ನಿಶ್ಚಿತಾರ್ಥಕ್ಕೆ ಪಶ್ಚಿಮವಾಹಿನೀಗೆ ಹೋಗಿದ್ದಾರೇಂತ ತಿಳೀತು.

—"ಕೇಫ"

———o———



ಶಾಲಾ ಮಾಸ್ತರ ಮನೆಗೆ ಕದಿಯುಕ್ಕೆ ಬಂದಿದೀಯಲ್ಲೋ! ಬೆಪ್ಪೆ!!
ಅರ್ಧ ನನಗೆ ಕೊಟ್ಟರೆ ಒಳ್ಳೆಮನೆ ವಿಳಾಸ ಕೊಡ್ತೀನಪ್ಪಾ!